ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಡಿಸೆಂಬರ್ 24, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 221 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
☎ 08192 254736 91642 99999




## ಕಂಚಿಕೆರೆ ವಿರೂಪಾಕ್ಷಪ್ಪ ನಿಧನ

ದಾವಣಗೆರೆಯ ಶ್ರೀ ಜಗದ್ಗುರು ಮುರುಘರಾಜೇಂದ್ರ ಟ್ರಸ್ಟ್, ಶ್ರೀ ಶಿವಯೋಗಾಶ್ರಮದ ಮಾಜಿ ಕಾರ್ಯದರ್ಶಿಗಳು, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಮಾಜಿ ನಿರ್ದೇಶಕರೂ, ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಮಾಜಿ ಉಪಾಧ್ಯಕ್ಷರೂ ಮತ್ತು ನಿರ್ದೇಶಕರೂ ಆಗಿದ್ದ

**ಶ್ರೀ ಕಂಚಿಕೆರೆ ವಿರೂಪಾಕ್ಷಪ್ಪನವರು**

ದಿನಾಂಕ 23-12-2023ರ ಶನಿವಾರ ರಾತ್ರಿ 9 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 77 ವರ್ಷ ವಯಸ್ಸಾಗಿತ್ತು. ಮೃತರು ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.

ಶ್ರೀ ಕಂಚಿಕೆರೆ ವಿರೂಪಾಕ್ಷಪ್ಪನವರ ಪಾರ್ಥಿವ ಶರೀರವನ್ನು ದಿನಾಂಕ 24-12-2023ರ ಭಾನುವಾರ ಬೆಳಿಗ್ಗೆ 10 ರಿಂದ 12ರ ವರೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ ಶಿವಯೋಗಾಶ್ರಮದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗಿವುದು. ನಂತರ ಮಧ್ಯಾಹ್ನ 1 ಗಂಟೆಗೆ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

ಇಂತಿ ದುಃಖತಪ್ತರು :
ಡಿವಿಎಸ್ ಕುಟುಂಬ ವರ್ಗ, ಭರಮಸಾಗರ ಮತ್ತು ಕಂಚಿಕೆರೆ ಕುಟುಂಬ ವರ್ಗದವರು



## ಶ್ರೀಮತಿ ದ್ರಾಕ್ಷಾಯಣಮ್ಮ ನಿಧನ

ಬೆಂಗಳೂರು ಬಸವೇಶ್ವರ ನಗರ ವಾಸಿ, ಹೆಚ್. ಕೆ. ಶೇಖರಪ್ಪ ಇವರ ಪತ್ನಿ **ಶ್ರೀಮತಿ ದ್ರಾಕ್ಷಾಯಣಮ್ಮ** ಇವರು ದಿನಾಂಕ 23-12-2023ರ ಶನಿವಾರ ರಾತ್ರಿ 9.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 83 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24-12-2023ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿನ ರಾಜಾಜಿ ನಗರದಲ್ಲಿರುವ ಹರಿಶ್ಚಂದ್ರ ಘಾಟ್ ಎದುರುಗಡೆ ಇರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

– ದುಃಖತಪ್ತ ಕುಟುಂಬ ವರ್ಗ
ಮೊ. : 99000 63999, 99005 15099

## ಏಳನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ನಾಗರತ್ನಮ್ಮ ಎಸ್.ಕೆ.**

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು... ಸದಾ ನಿಮ್ಮ ಸ್ಮರಣೆಯಲ್ಲಿರುವ ...

ಪತಿ : ಶ್ರೀ ಎಸ್.ಟಿ. ಕುಸುಮಶ್ರೇಷ್ಠಿ, ವರ್ತಕರು, ದಾವಣಗೆರೆ.
ಮಕ್ಕಳಾದ : ಡಾ|| ಎಸ್.ಕೆ. ವೆಂಕಟೇಶ್ ಗುಪ್ತ ಮತ್ತು ಶ್ರೀಮತಿ ಡಾ|| ಮಾದವಿ ಗುಪ್ತ
ಎಸ್.ಕೆ. ಪ್ರಶಾಂತ ಗುಪ್ತ ಮತ್ತು ಶ್ರೀಮತಿ ದೀಪಾ ಎಸ್.ಪಿ.
ಎಸ್.ಕೆ. ತಿಮ್ಮರಾಜ ಗುಪ್ತ ಮತ್ತು ಶ್ರೀಮತಿ ಶ್ರೀ ಗೌರಿ
ಎಸ್.ಪಿ. ಸಂದೀಪ್ ಮತ್ತು ಶ್ರೀಮತಿ ಪೂರ್ಣಿಮಾ ಹಾಗೂ ಬಂಧು-ಮಿತ್ರರು.


hcgoncology.com
HCG The Specialist in Cancer Care
A HEALTHY LIFE WITH A NEW LIVER
Date : 25th Monday, December 2023 / Time : 11.30 am to 2.00 pm
Venue : Aaraike Super Specialty Hospital, Nittuvalli, Davangere-2.
Consultant :
DR. BASANT MAHADEVAPPA
Consultant HPB & Liver Transplant
To win over cancer, call today - 78294 34249
HCG HOSPITAL
9/1, Kalinga Rao Road, Sampangi Rama Nagar, Bengaluru, Karnataka 560002




## 15ನೇ ವರ್ಷದ ಪುಣ್ಯಸ್ಮರಣೆ



**ದಿ|| ಬಿ. ಓಂಕಾರಪ್ಪನವರು**
ಸ್ವಾತಂತ್ರ್ಯ ಹೋರಾಟಗಾರರು ಹಾಗೂ ರೈಲ್ವೆ ಸತ್ಯಾಗ್ರಾಹಿಗಳು ಹನುಮನಹಳ್ಳಿ.

ನೀವು ನಮ್ಮನ್ನಗಲಿ ಇಂದಿಗೆ 15 ವರ್ಷಗಳಾದವು

ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿ, ಒಬ್ಬ ದಾರ್ಶನಿಕನಂತೆ ನೀವು ಬದುಕಿದಿರಿ.
ಧೃತಿಗೆಡದೆ ನೀವು ಆಂಗ್ಲರ ವಿರುದ್ಧ ಹೋರಾಡಿದಿರಿ,
ರಾಷ್ಟ್ರಪ್ರೇಮ ಮೆರೆದ ನಿಮ್ಮ ದೇಶಭಕ್ತಿ, ಕೆಚ್ಚೆದೆಯ ಹೋರಾಟಗಳು,
ನಿಮ್ಮ ತಾಳ್ಮೆ, ಸಹನೆ, ಪ್ರತಿಯೊಂದು ಹೆಜ್ಜೆಯೂ ನಮಗೆಲ್ಲಾ ಎಂದೆಂದಿಗೂ ಸ್ಫೂರ್ತಿ,
ನಿಮ್ಮ ಪ್ರೀತಿಯ ನೆನಪೇ ನಮ್ಮ ಮನಸ್ಸಿಗೆ ಸಮಾಧಾನ.
ಎಂದೆಂದಿಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ ದುಃಖತಪ್ತರು..

ಪತ್ನಿ : ಶ್ರೀಮತಿ ಕಮಲಾಕ್ಷಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗದವರು
ಬಿ.ಓ. ರಾಜು, ಗ್ರಾಮ ಪಂಚಾಯ್ತಿ ಸದಸ್ಯರು, ಹನುಮನಹಳ್ಳಿ.

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

# ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



**ಶ್ರೀ ಕೆ. ನಾಗಕುಮಾರಸ್ವಾಮಿ, ವಕೀಲರು**
ಜನನ : 11-6-1954 ನಿಧನ : 17-12-2023

**ಶ್ರೀಮತಿ ಕೆ.ಬಿ. ಕಲ್ಲಮ್ಮ ಮತ್ತು ಮಕ್ಕಳು**

# 571/2, 1ನೇ ಮೇನ್, 1ನೇ ಕ್ರಾಸ್, ಶಿವಕುಮಾರ ಸ್ವಾಮಿ ಬಡಾವಣೆ, ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 17-12-2023ನೇ ಭಾನುವಾರ ರಾತ್ರಿ 8 ಗಂಟೆಗೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಕೆ. ನಾಗಕುಮಾರಸ್ವಾಮಿ**
ವಕೀಲರು

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಸಮಾರಾಧನೆ'ಯನ್ನು**

ದಿನಾಂಕ 25-12-2023ನೇ ಸೋಮವಾರ ಬೆಳಿಗ್ಗೆ 10-00 ಗಂಟೆಗೆ 'ನಮ್ಮ ಸ್ವಗೃಹ' # 571/2, 1ನೇ ಮೇನ್, 1ನೇ ಕ್ರಾಸ್, ಶಿವಕುಮಾರ ಸ್ವಾಮಿ ಬಡಾವಣೆ, ದಾವಣಗೆರೆ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಕೆ.ಬಿ. ಕಲ್ಲಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ಮೊ. : 98453 02194

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಿ, ಮೃತರಿಗೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.




**ದಿನಾಂಕ : 24.12.2023 ರಿಂದ 30.12.2023ರವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಬಂಧು-ಮಿತ್ರರು ನಿಮ್ಮ ತಾಳ್ಮೆಯನ್ನು ಪರೀಕ್ಷಿಸಲು ಪ್ರಯತ್ನಿಸುವರು. ಆದರೆ ಅಂತಿಮ ಗೆಲುವು ನಿಮ್ಮದೇ. ಪ್ರತಿಯೊಂದು ಕೆಲಸಕ್ಕೂ ಸಂಗಾತಿಯ ಸಹಕಾರ ದೊರೆಯಲಿದೆ. ಹಣಕಾಸಿನ ನೆರವು ಉತ್ತಮವಾಗಿರುವುದರಿಂದ ಚಿಂತಿಸಬೇಕಿಲ್ಲ. ಲಲಿತಕಲಾಸಕ್ತರಿಗೆ ಹಲವರಿಂದ ಉತ್ತಮ ಮಾರ್ಗದರ್ಶನ ಸಿಗಲಿದೆ, ವ್ಯಾಪಾರ-ವ್ಯವಹಾರಗಳಲ್ಲಿ ಅನುಭವಿಗಳಾದ ಅನುಭವಿಗಳ ಸಲಹೆ - ಸೂಚನೆ ಪಡೆಯಿರಿ. ವಿದ್ಯಾರ್ಥಿಗಳು ತಮ್ಮ ಸೋಮಾರಿತನದಿಂದಾಗಿ ಉತ್ತಮ ಫಲಿತಾಂಶವನ್ನು ಕೈಚೆಲ್ಲುವರು ಹೊಸ ವಾಹನ ಕೊಳ್ಳುವ ಸಂದರ್ಭ ಬರಲಿದೆ. ಭಾನು-ಮಂಗಳ-ಗುರು ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಅತ್ಯುತ್ಸಾಹದಿಂದ ಆರಂಭಿಸಿದ ವ್ಯವಹಾರವು ಮೊದಮೊದಲು ತುಸು ಹಿನ್ನಡೆ ಸಾಧಿಸಲಿದೆ. ಹಾಗೆಂದ ಮಾತ್ರಕ್ಕೆ ಚಿಂತೆ ಬೇಡ. ಕುಟುಂಬದ ವಿಚಾರದಲ್ಲಿ ಗಟ್ಟಿ ನಿರ್ಧಾರ ತೆಗೆದುಕೊಳ್ಳುವಲ್ಲಿ ವಿಫಲರಾಗುವಿರಿ. ಮನೆಯಲ್ಲಿರುವ ಹಿರಿಯರ ದ್ವಂದ್ವ ನೀತಿಯಿಂದಾಗಿ ವಿಚಲಿತರಾಗುವಿರಿ, ಬೇಳೆಕಾಳು ಮೊದಲಾದ ದಿನಸಿ ವ್ಯಾಪಾರಿಗಳಿಗೆ ಉತ್ತಮ ವಹಿವಾಟಿನಿಂದ ಹೆಚ್ಚಿನ ಲಾಭವಾಗಲಿದೆ. ಲೆಕ್ಕಪರಿಶೋಧಕರಿಗೆ ಸಿಬ್ಬಂದಿಗಳು ಮಾಡುವ ತಪ್ಪಿನಿಂದಾಗಿ ಮುಜುಗರಕ್ಕೆ ಒಳಗಾಗುವರು. ಸಂಗೀತ ಕಲಾವಿದರಿಗೆ ತಾತ್ಕಾಲಿಕ ಹಿನ್ನಡೆಯಾಗಲಿದೆ. ಗುರು-ಶುಕ್ರ-ಶನಿ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಚ.ಕೆ.ಕೋ.ಹ.)**

ಬಹಳ ದಿನಗಳಿಂದ ಬಾಧಿಸುತ್ತಿದ್ದ ದೈಹಿಕ ಖಾಯಿಲೆಗೆ ಶಸ್ತ್ರಚಿಕಿತ್ಸೆಯಾಗಲಿದೆ, ತೆರಿಗೆ ತಜ್ಞರಿಗೆ ಬೇಡಿಕೆ ಹೆಚ್ಚಲಿದೆ. ನಿಮ್ಮಲ್ಲಿರುವ ಕಾರ್ಯಕ್ಷಮತೆ ವೃತ್ತಿಯಲ್ಲಿರುವ ಬದ್ಧತೆಯನ್ನು ಮೇಲಾಧಿಕಾರಿಗಳು ಮೆಚ್ಚುವರು ಸಿನಿಮಾ ಕಲಾವಿದರಿಗೆ ಉತ್ತಮ ಅವಕಾಶಗಳು ಹೆಚ್ಚಿನ ಸಂಪಾದನೆಗೆ ಕಾರಣವಾಗಲಿದೆ. ಉನ್ನತಾಧ್ಯಯನ ಮಾಡಬಯಸುವವರಿಗೆ ಸಾಮಾಜಿಕ ನೆರವು ದೊರೆಯಲಿದೆ. ಕೃಷಿ ಭೂಮಿ ಕೊಳ್ಳುವ ಮೊದಲು ಮೂಲ ದಾಖಲೆಗಳನ್ನು ಪರಿಶೀಲಿಸಿ, ಗೋ ಸೇವೆಮಾಡಿ. ಭಾನು-ಬುಧ-ಗುರು ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಆಸ್ತಿ ಕೊಳ್ಳಬೇಕೆಂಬ ನಿಮಗೆ ಹಲವು ರೀತಿಯಲ್ಲಿ ಹಲವರಿಂದ ನೆರವು ದೊರೆಯಲಿದೆ. ಇದನ್ನು ಸದುಪಯೋಗಪಡಿಸಿಕೊಳ್ಳುವುದು ನಿಮಗೆ ಬಿಟ್ಟ ವಿಚಾರ. ಯುವಕರ ನಡಾವಳಿಯಲ್ಲಿ ಆಲಸ್ಯತನ ಕಂಡುಬರಲಿದೆ, ಭವಿಷ್ಯದ ದೃಷ್ಟಿಯಿಂದ ಇದು ಒಳ್ಳೆಯದಲ್ಲ. ಮನೆಯಲ್ಲಿ ಸದಸ್ಯರೊಂದಿಗೆ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ಒಗ್ಗಟ್ಟಿಗೇನೂ ತೊಂದರೆಯಿಲ್ಲ. ನೀವು ಮಧ್ಯ ವಯಸ್ಕರಾಗಿದ್ದಲ್ಲಿ ರಕ್ತ ಸಂಬಂಧಿ ದೋಷಗಳು ಕಾಣಿಸಿಕೊಳ್ಳಬಹುದು. ಆದಾಯದಲ್ಲಿ ತುಸು ಕಡಿತ, ದೈನಂದಿನ ಜೀವನಕ್ಕೇನೂ ತೊಂದರೆಯಿಲ್ಲ. ಭಾನು-ಸೋಮ-ಬುಧ ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಕೃಷಿ ಕ್ಷೇತ್ರದಲ್ಲಿ ಶ್ರಮಿಸಿದವರಿಗೆ ಸಾಮಾಜಿಕ ಗೌರವ ಸಲ್ಲಲಿದೆ. ಹಣಕಾಸಿನ ಸ್ಥಿತಿ ಮಂದಗತಿಯಲ್ಲಿರುವುದರಿಂದ ಖರ್ಚು-ವೆಚ್ಚಗಳ ಮೇಲೆ ಹಿಡಿತ ಮಾಡುವುದು ಮೇಲು ಯಾರೊಂದಿಗೇ ಆಗಲಿ ಮಾತನಾಡುವಾಗ ಪರಿಣಾಮದ ಎಚ್ಚರವಿರಲಿ. ಯುವಕರು ಅತಿ ಚುರುಕಿನಿಂದ ಕೆಲಸ ಕಾರ್ಯಗಳನ್ನು ಮಾಡಿ ಹಿರಿಯರ ಮನ ಗೆಲ್ಲುವರು. ಅತಿಯಾದ ಮೋಜು ಮಸ್ತಿಯಿಂದಾಗಿ ಅಜೀರ್ಣ ಸಮಸ್ಯೆಗಳು ಕಾಡಲಿವೆ. ವ್ಯಾಪಾರ-ವ್ಯವಹಾರದಲ್ಲಿ, ಲಾಭಾಂಶದಲ್ಲಿ ಕಡಿತ ಕಂಡುಬರಲಿದೆ, ಮಹಿಳೆಯರಿಗೆ ಉತ್ತಮ ದಿನಗಳು. ಭಾನು-ಗುರು-ಶುಕ್ರ ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಆದಾಯ ಉತ್ತಮವಾಗಿದ್ದರೂ ಅದೇ ಪ್ರಮಾಣದ ಖರ್ಚೂ ಇರುವುದರಿಂದ ಉಳಿತಾಯದ ಬಗ್ಗೆ ಚಿಂತಿಸದಿರುವುದು ಮೇಲು. ಉದ್ಯಮಿಗಳಿಗೆ ಆಲಸ್ಯತನ ಅಷ್ಟು ಒಳ್ಳೇದಲ್ಲ. ಆಸ್ತಿಗೆ ಸಂಬಂಧಿಸಿದಂತೆ ಹಿರಿಯರೊಂದಿಗೆ ರಾಜಿ-ಪಂಚಾಯ್ತಿ ಮುಖಾಂತರ ಹೊಂದಾಣಿಕೆ ಮಾಡಿಕೊಳ್ಳುವುದು ಉತ್ತಮ. ನರ ಸಂಬಂಧಿ ಅನಾರೋಗ್ಯ ಸಮಸ್ಯೆ ನಿಮ್ಮ ಉತ್ಸಾಹವನ್ನು ಕುಗ್ಗಿಸಲಿದೆ. ಮಂಗಳ ಕಾರ್ಯದ ಕೆಲಸವನ್ನು ಎಲ್ಲರಿಗೂ ವಹಿಸುವುದು ಉತ್ತಮ, ಹೊಸ ವ್ಯವಹಾರವನ್ನು ವಿಸ್ತರಿಸುವ ಮೊದಲು ಮತ್ತೊಮ್ಮೆ ಯೋಚಿಸುವುದು ಮೇಲು, ಗುರುಗಳ ಸೇವೆ ಮಾಡಿ. ಮಂಗಳ-ಬುಧ-ಗುರು ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಯಾವುದೋ ಹಳೆಯ ವಿಷಯಕ್ಕೆ ಸಂಬಂಧಿಸಿದಂತೆ ಬಂಧುಗಳೊಂದಿಗೆ ಅನಾವಶ್ಯಕ ವಾದ-ವಿವಾದವುಂಟಾಗಲಿದೆ. ರಾಜಕೀಯ ಸೇರಬೇಕೆಂಬ ನಿಮ್ಮ ಬಯಕೆಗೆ ಮನೆಯವರಿಂದ ಪ್ರತಿರೋಧ ಬರಬಹುದು, ಅತೀ ಬುದ್ಧಿವಂತಿಕೆಯಿಂದ ವ್ಯವಹರಿಸುವಿರಿ, ಆದರೆ ಇದು ಸಾರ್ವಕಾಲಿಕವಾಗಿ ಪ್ರಯೋಜನಕ್ಕೆ ಬಾರದು ಎಂಬುದು ನೆನಪಿರಲಿ. ಕೃಷಿ ಭೂಮಿಯನ್ನು ಅಭಿವೃದ್ಧಿಪಡಿಸಲು ಹಲವರ ನೆರವು ಪಡೆಯುವಿರಿ, ವಿದೇಶಿ ಕಂಪನಿಗಳೊಂದಿಗೆ ವ್ಯವಹರಿಸುವಾಗ ತುಸು ಎಚ್ಚರದಿಂದಿರಿ. ಸಾಧು-ಸಜ್ಜನರ ದರ್ಶನ ಪಡೆಯುವಿರಿ. ಸೋಮ-ಶುಕ್ರ-ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಮಲ್ಲಯುದ್ಧ ನಿಪುಣರಿಗೆ ದೇಶೀಯವಾಗಿ ಹೆಚ್ಚಿನ ಬೇಡಿಕೆ ಬರಲಿದೆ. ಏರೋನ್ಯಾಟಿಕಲ್ ಅಧ್ಯಯನ ಮಾಡಿದವರಿಗೆ ಅಭಿವೃದ್ಧಿ ಕಂಡುಬರಲಿದೆ. ಹಣಕಾಸಿನ ಹರಿವು ಉತ್ತಮವಾಗಿಯೇ ಇರುವುದರಿಂದ ಆಸ್ತಿ ಕೊಳ್ಳಬಹುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಹಿನ್ನಡೆ ಕಂಡುಬರಲಿದ್ದು, ಚಿಂತೆಗೆ ಕಾರಣವಾಗಲಿದೆ. ವಿದೇಶದಿಂದ ಬಂಧುಗಳ ಆಗಮನವಾಗಲಿದ್ದು, ಮನೆಯಲ್ಲಿ ಹಬ್ಬದ ವಾತಾವರಣ ಮೂಡಲಿದೆ. ಹಳೇ ಖಾಯಿಲೆಗಳು ಮರುಕಳಿಸದಂತೆ ಎಚ್ಚರ ವಹಿಸಿರಿ. ಅನಿರೀಕ್ಷಿತವಾಗಿ ಪ್ರಯಾಣ ಪ್ರಸಂಗ ಬರಬಹುದು, ಬಡವರಿಗೆ ಅನ್ನದಾನ ಮಾಡಿ. ಭಾನು-ಮಂಗಳ-ಗುರು ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಹೊಸ ಸೊತ್ತೊಂದನ್ನು ಖರೀದಿಸುವ ಮುನ್ನ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮರುಪರಿಶೀಲಿಸುವುದು ಮೇಲು. ಮಹಿಳೆಯರು ತಾವು ಆಡಬಹುದಾದ ಮಾತಿನಿಂದಾಗಬಹುದಾದ ಪರಿಣಾಮವನ್ನು ಯೋಚಿಸುವುದು ಉತ್ತಮ. ಮನೆಯಲ್ಲಿ ಶುಭ ಸಮಾರಂಭವೊಂದು ನಡೆಯುವಾಗ ಅಮೂಲ್ಯ ವಸ್ತುಗಳು ಕಳ್ಳತನವಾಗಲಿದೆ. ಮೊದಲೇ ಎಚ್ಚರದಿಂದಿರುವುದು ಮೇಲು ಸರಕು ಸಾಗಾಣಿಕೆಯಲ್ಲಿ ಹೆಚ್ಚಿನ ವಹಿವಾಟು ಲಾಭ ದಾಯಕವಾಗಲಿದೆ. ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ನಿರೀಕ್ಷಿಸಿದ ಲಾಭವನ್ನು ತರದೇ ಹೋಗಬಹುದು. ಗೋ ಸೇವೆ ಮಾಡಿ. ಬುಧ-ಗುರು-ಶನಿ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ನ್ಯಾಯಮಾರ್ಗದಲ್ಲಿ ನಡೆಯಬೇಕೆಂಬುವವರಿಗೆ ನೂರೆಂಟು ವಿಘ್ನಗಳು ಬರಲಿವೆ. ಹಾಗೆಂದ ಮಾತ್ರಕ್ಕೆ ವಿಚಲಿತರಾಗುವುದು ಬೇಡ.ಹಣಕಾಸಿನ ನಿರ್ವಹಣೆ ನಿಮ್ಮ ಕೈಯಲ್ಲಿದ್ದರೆ ಉತ್ತಮ, ಲೇವಾದೇವಿ ವ್ಯವಹಾರಕ್ಕೆ ಯಾವುದೇ ಕಾರಣಕ್ಕೂ, ಕೈಹಾಕಬೇಡಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವವರು ಮೇಲಾಧಿಕಾರಿಗಳೊಂದಿಗೆ ವಾಗ್ವಾದ ಮಾಡದಿರುವುದು ಮೇಲು. ಇಲ್ಲವಾದಲ್ಲಿ ನೌಕರಿಗೇ ಸಂಚಕಾರ ಬಂದೀತು, ಮಡದಿ, ಮಕ್ಕಳ ಕೋರಿಕೆ ಬೆಳೆಯುತ್ತಾ ಹೋಗಲಿದೆ. ಶಸ್ತ್ರವೈದ್ಯರಿಗೆ ಆದಾಯದಲ್ಲಿ ಹೆಚ್ಚಳ ಕಂಡುಬರಲಿದೆ. ಪರಾವಲಂಬನೆ ಕಡಿಮೆಮಾಡಿ. ಸೋಮ-ಶುಕ್ರ-ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ವಿದ್ಯಾರ್ಥಿಗಳು ಅಧ್ಯಯನದ ವಿಷಯವನ್ನು ಗಂಭೀರವಾಗಿ ಪರಿಗಣಿಸುವುದು ಮೇಲು, ಇಲ್ಲವಾದಲ್ಲಿ ಅದು ಭವಿಷ್ಯದ ಮೇಲೆ ಅಡ್ಡ ಪರಿಣಾಮ ಬೀರಬಹುದು.ಸರ್ಕಾರದಿಂದ ಆಗಬೇಕಾಗಿರುವ ಕೆಲಸಗಳಿಗೆ ದಾಖಲೆ ಮುಂತಾದ ತಾಂತ್ರಿಕ ಅಡಚಣೆಗಳು ಎದುರಾಗಲಿವೆ, ಅಡ್ಡ ದಾರಿಯಲ್ಲಿ ಹಣಗಳಿಸುವ ಹೆಬ್ಬಯಕೆ ಬೇಡ, ವಿದೇಶದಲ್ಲಿ ಅಧ್ಯಯನ ಮಾಡುತ್ತಿರುವವರಿಗೆ ಹಣಕಾಸಿನ ಸಮಸ್ಯೆ ಕಾಡಲಿದೆ. ಕಟ್ಟಡ ನಿರ್ಮಾಣ ಮಾಡುವವರಿಗೆ ಆದಾಯ ಹೆಚ್ಚಲಿದೆ. ದುಂದುವೆಚ್ಚಕ್ಕೊಂದು ಕಡಿವಾಣ ಹಾಕಿ. ಮಂಗಳ-ಬುಧ-ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ವ್ಯಾಪಾರ ವ್ಯವಹಾರ ಮಾಡುವವರು ಗ್ರಾಹಕರೊಂದಿಗೆ ಸೌಹಾರ್ದತೆಯಿಂದ ವರ್ತಿಸುವುದು ಮೇಲು, ದೊಡ್ಡ ಪ್ರಮಾಣದ ಅಡಿಗೆ ತಯಾರ ಕರಿಗೆ ಬೇಡಿಕೆ ಹೆಚ್ಚಲಿದೆ. ರಾಜಕಾರಣಿಗಳು ಸಾರ್ವಜನಿಕವಾಗಿ ಮಾತನಾಡುವಾಗ ತುಸು ಎಚ್ಚರದಿಂದಿರುವುದು ಉತ್ತಮ, ಅತಿಯಾದ ಕೋಪ-ತಾಪಗಳು ಸ್ನೇಹಭಾವಕ್ಕೆ ಧಕ್ಕೆಯನ್ನುಂಟುಮಾಡಬಹುದು. ಪರಿವಾರದೊಂದಿಗೆ ಮಾಡಲಿರುವ ತೀರ್ಥಯಾತ್ರೆ ಫಲದಾಯಕವಾಗಲಿದೆ. ಅವಿವಾಹಿತರಿಗೆ ಕಂಕಣಭಾಗ್ಯ ಕೂಡಿಬರಲಿದೆ, ಮಹಿಳೆಯರಿಗೆ ಉತ್ತಮ ದಿನಗಳು. ಭಾನು-ಸೋಮ-ಗುರು ಶುಭ ದಿನಗಳು.

### ಈ ವಾರದ ವಿಶೇಷ :

**ವಿಶೇಷದಿನಗಳು : ದಿನಾಂಕ: 24.12.2023ನೇ ಭಾನುವಾರ**
**ಮುಕ್ಕೋಟಿದ್ವಾದಶೀ ಹನುಮದ್ವ್ರತಮ್, ದಿನಾಂಕ: 25.12.2023ನೇ ಸೋಮವಾರ**
**ದತ್ತಜಯಂತೀ ಹೊಸ್ತಿಲಹುಣ್ಣಿಮೆ. ದಿನಾಂಕ: 28.12.2023ನೇ ಗುರುವಾರ**
**ಗುರುಪುಷ್ಯಾಮೃ ಸಿದ್ಧಿಯೋಗ. ದಿನಾಂಕ:30.12.2023ನೇ ಶನಿವಾರ**
**ಸಂಕಷ್ಟ ಚತುರ್ಥೀ ಚಂದ್ರೋದಯ ರಾತ್ರಿ 9-05ಕ್ಕೆವಾರ ಭವಿಷ್ಯ.**
**ದಿನಾಂಕ: 24.12.2023 ರಿಂದ ದಿನಾಂಕ: 30.12.2023 ರವರೆಗೆ.**

# ಉಜ್ಜಯಿನಿಯಲ್ಲಿ ನಾಳೆ ಲಕ್ಷ ದೀಪೋತ್ಸವ, ಪುಣ್ಯಸ್ಮರಣೋತ್ಸವ



ಉಜ್ಜಯಿನಿ, ಡಿ.23- ಶ್ರೀ ಲಿಂ. ಜಗದ್ಗುರು ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳವರ 12ನೇ ವರ್ಷದ ಪುಣ್ಯಸ್ಮರಣೋತ್ಸವದ ಅಂಗವಾಗಿ ನಾಡಿದ್ದು ದಿನಾಂಕ 25ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ಪೀಠದಲ್ಲಿ ಸಾಮೂಹಿಕ ವಿವಾಹಗಳು ನಡೆಯಲಿದ್ದು ಅಂದು ಸಂಜೆ 6.30 ಕ್ಕೆ ಶ್ರೀ ಉಜ್ಜಯಿನಿ ಜಗದ್ಗುರು ಮರುಳಸಿದ್ದೇಶ್ವರ ಸ್ವಾಮಿಯ ಕಾರ್ತಿಕ ಲಕ್ಷದೀಪೋತ್ಸವ ಜರುಗಲಿದೆ.

ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ನೇತೃತ್ವವನ್ನು ಅಖಿಲ ಭಾರತ ಪ್ರೀತಿಯ ಶಿವಾಚಾರ್ಯಸಮೂಹಗಣ ವಹಿಸಲಿದೆ. ಅಖಿಲ ಭಾರತ ವೀರಶೈವ ಶಿವಾರ್ಯ ಸಂಸ್ಥೆ, ಮಠಾಧೀಶರ ಧರ್ಮ ಪರಿಷತ್ ಸಹಕಾರದಲ್ಲಿ ಕಾರ್ಯಕ್ರಮ ನಡೆಯಲಿದೆ. ಅಧ್ಯಕ್ಷತೆಯನ್ನು ಕೂಡ್ಲಿಗಿ ಶಾಸಕ ಡಾ. ಎನ್.ಟಿ. ಶ್ರೀನಿವಾಸ ವಹಿಸುವರು. ಕಾರ್ಯಕ್ರಮವನ್ನು ಬಿ.ವೈ. ವಿಜಯೇಂದ್ರ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ವೈ. ದೇವೇಂದ್ರಪ್ಪ, ಜಿ.ಎಂ. ಸಿದ್ದೇಶ್ವರ, ಜಮೀರ್ ಅಹಮ್ಮದ್‌ಖಾನ್, ಬಿ. ನಾಗೇಂದ್ರ, ವೈ. ಸತೀಶ, ಎನ್.ವೈ. ಗೋಪಾಲಕೃಷ್ಣ, ಯು.ಬಿ. ಬಣಕಾರ, ಕೆ. ನೇಮಿರಾಜ್‌ನಾಯ್ಕ, ಹೆಚ್.ಆರ್. ಗವಿಯಪ್ಪ, ಇ. ತುಕಾರಾಂ, ನಾ.ರಾ. ಭರತ್‌ರೆಡ್ಡಿ, ಬಿ.ಪಿ. ಹರೀಶ್, ಎಂ.ಪಿ. ಲತಾ, ಕೃಷ್ಣಾನಾಯ್ಕ್, ಬಿ. ದೇವೇಂದ್ರಪ್ಪ, ಕೆ.ಎಸ್. ಈಶ್ವರಪ್ಪ, ಬಿ.ಆರ್. ಪಾಟೀಲ್, ಯಶವಂತರಾಯಗೌಡ ಪಾಟೀಲ್, ಬಿ.ಕೆ. ಸಂಗಮೇಶ್ವರ, ಜೆ.ಟಿ. ಪಾಟೀಲ, ಪ್ರಕಾಶ ಕೋಳಿವಾಡ, ಎಂ.ಪಿ. ರೇಣುಕಾಚಾರ್ಯ, ಎಲ್. ಭೀಮಾನಾಯ್ಕ, ಎಸ್.ವಿ. ರಾಮಚಂದ್ರಪ್ಪ, ಹೆಚ್.ಎಸ್. ಶಿವಶಂಕರ್, ಹೆಚ್.ಪಿ. ರಾಜೇಶ್, ಪಿ.ಟಿ. ಪರಮೇಶ್ವರನಾಯ್ಕ, ಶ್ರೀಮತಿ ನಿಂಗಮ್ಮ ಸಣ್ಣಮಾರಪ್ಪ, ಶ್ರೀಮತಿ ಪುಷ್ಪಾವತಿ ಎ. ರೇವಣ್ಣ ಮತ್ತಿತರರು ಆಗಮಿಸುವರು.

ಕಾರ್ಯಕ್ರಮದಲ್ಲಿ ನಿತೇಶ್ ಪಾಟೀಲ್, ಸಂಜೀವ್ ಪಾಟೀಲ್, ಕೆ.ಎಂ. ಸಂತೋಷ್, ಪಿ.ಕೆ.ಎಂ. ಪ್ರಶಾಂತ್ ಅವರುಗಳಿಗೆ ಗುರುರಕ್ಷೆ ನೀಡಲಾಗುವುದು.

ನಾಳೆ ಸೋಮವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ಪೀಠದಲ್ಲಿ ಸಾಮೂಹಿಕ ವಿವಾಹಗಳು ಹಾಗೂ ಸಂಜೆ 6.30 ಕ್ಕೆ ಶ್ರೀ ಉಜ್ಜಯಿನಿ ಜಗದ್ಗುರು ಮರುಳಸಿದ್ಧೇಶ್ವರ ಸ್ವಾಮಿಯ ಕಾರ್ತಿಕ ಲಕ್ಷದೀಪೋತ್ಸವ ಜರುಗಲಿದೆ.

ಇಂದು ಸಂಜೆ 6 ಗಂಟೆಗೆ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗುವುದು. ಡಿ. 25 ರ ರಾತ್ರಿ 9 ಗಂಟೆಯಿಂದ ಖ್ಯಾತ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ.

# ವೀರಶೈವ ಲಿಂಗಾಯತ ಮಹಾಸಭಾ ಅಧಿವೇಶನದ ಸಮಾರೋಪ ಇಂದು

**ಕಾರ್ಯಕ್ರಮದಲ್ಲಿ ಕಾಶಿ ಪೀಠದ ಜಗದ್ಗುರುಗಳು, ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ ಸೇರಿದಂತೆ ಅನೇಕ ಗಣ್ಯರು ಭಾಗಿ**

ಬಾಪೂಜಿ ಎಂಬಿಎ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ ಅಖಿಲ ಭಾರತ ವೀರಶೈವ -ಲಿಂಗಾಯತ ಮಹಾಸಭಾದ 24 ನೇ ಮಹಾ ಅಧಿವೇಶನದ ಸಮಾರೋಪ ಸಮಾರಂಭವು ಇಂದು ಮಧ್ಯಾಹ್ನ 3.30 ಕ್ಕೆ ಜರುಗಲಿದೆ.

ಬೆಳಿಗ್ಗೆ 9.30ಕ್ಕೆ ಧಾರ್ಮಿಕ ಅಧಿವೇಶನ ಜರುಗಲಿದ್ದು, ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ಕೊಟ್ಟೂರು ಸಂಸ್ಥಾನ ಮಠದ ಶ್ರೀ ಕೊಟ್ಟೂರು ಬಸವಲಿಂಗ ಸ್ವಾಮೀಜಿ, ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳು, ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಮಾಜಿ ಸಿಎಂ ಜಗದೀಶ್ ಶೆಟ್ಟರ್ ಕಾರ್ಯಕ್ರಮ ಉದ್ಘಾಟಿಸುವರು. ಆನಂದಪುರ ಶ್ರೀ ಮುರುಘರಾಜೇಂದ್ರ ಮಹಾಸಂಸ್ಥಾನ ಮಠದ ಶ್ರೀ ಮಲ್ಲಿಕಾರ್ಜುನ ಮುರುಘಾರಾಜೇಂಸದ್ರ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದು, ಶ್ರೀ ಜಗದ್ಗುರು ಪಕೀರ ದಿಂಗಾಲೇಶ್ವರ ಸ್ವಾಮೀಜಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ಬೆಳಿಗ್ಗೆ 9.30 ರಿಂದ 12.30 ರವರೆಗೆ ಮಹಿಳಾ ಮತ್ತು ಯುವ ಅಧಿವೇಶನ ನಡೆಯಲಿದ್ದು, ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕಾರ್ಯಕ್ರಮ ಉದ್ಘಾಟಿಸುವರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅಧ್ಯಕ್ಷತೆ ವಹಿಸಲಿದ್ದು, ಬೆಳಗಾವಿ ಸಂಸದೆ ಮಂಗಳ ಸುರೇಶ್ ಅಂಗಡಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ಮಧ್ಯಾಹ್ನ 12.15 ರಿಂದ ಮಧ್ಯಾಹ್ನ 2 ರವರೆಗೆ ನೌಕರರ ಅಧಿವೇಶನ ನಡೆಯಲಿದ್ದು, ಸಚಿವ ಶಿವಾನಂದ ಎಸ್. ಪಾಟೀಲ್ ಕಾರ್ಯಕ್ರಮ ಉದ್ಘಾಟಿಸುವರು. ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಉಪಾಧ್ಯಕ್ಷ ಶಂಕರ ಮಹಾದೇವ ಬಿದರಿ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಸ್ಕಾಂ ಎಂಡಿ ಮಹಾಂತೇಶ್ ಬೀಳಗಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ಮಧ್ಯಾಹ್ನ 12.15 ರಿಂದ 2 ರವರೆಗೆ ಸಾಹಿತಿಗಳ ಅಧಿವೇಶನ ನಡೆಯಲಿದೆ. ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಕಾರ್ಯಕ್ರಮ ಉದ್ಘಾಟಿಸುವರು. ಮಹಾಸಭಾ ಉಪಾಧ್ಯಕ್ಷ ವಿನಯ್ ಕುಲಕರ್ಣಿ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಬಿ.ವೈ. ರಾಘವೇಂದ್ರ ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ಮಧ್ಯಾಹ್ನ 3.30 ಕ್ಕೆ ಸಮಾರೋಪ ಸಮಾರಂಭದಲ್ಲಿ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಸಾಣೇಹಳ್ಳಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಶಿರಹಟ್ಟಿ ಶ್ರೀ ಫಕೀರ ಸಿದ್ಧರಾಮೇಶ್ವರ ಸ್ವಾಮೀಜಿ ಸೇರಿದಂತೆ ಇತರೆ ಮಠಾಧೀಶರು ಸಾನ್ನಿಧ್ಯ ವಹಿಸಲಿದ್ದಾರೆ.

ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದು, ಸಚಿವ ಈಶ್ವರ ಖಂಡ್ರೆ ಸಮಾರೋಪ ಭಾಷಣ ಮಾಡಲಿದ್ದಾರೆ.

ಇದೇ ವೇಳೆ ಮಹಾಸಭಾ ರಾಜ್ಯಾಧ್ಯಕ್ಷ ಎನ್. ತಿಪ್ಪಣ್ಣ ಅವರಿಗೆ ಗೌರವ ಸಮರ್ಪಣೆ ನೆರವೇರಲಿದೆ.

## ಹರಿಹರದಲ್ಲಿಂದು ಸುವರ್ಣ ಸಂಭ್ರಮ

ಪರಸ್ಪರ ಬಳಗ, ಕನ್ನಡ ಸಾಹಿತ್ಯ ಪರಿಷತ್, ತಾಲ್ಲೂಕು ಬಂಡಾಯ ಸಾಹಿತ್ಯ ಸಂಘಟನೆ, ಚಿಂತನ ಬಳಗ, ನಕ್ಷತ್ರ ಟಿ.ವಿ. ಸಾಹಿತ್ಯ ಸಂಗಮ ಮತ್ತು ಕರ್ನಾಟಕ ಜಾನಪದ ಪರಿಷತ್ ಹರಿಹರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕ ಸುವರ್ಣ ಸಂಭ್ರಮ ಆಚರಣೆ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಆಯೋಜಿಸಲಾಗಿದೆ.

ಕರ್ನಾಟಕ, ಕನ್ನಡ, ಸಂವಿಧಾನ ಕುರಿತು ಚಿಂತನೆ, ಕನ್ನಡ ನಾಡು, ನುಡಿ ಕುರಿತು ಕವಿಗೋಷ್ಠಿ ಹಾಗೂ ಅಂಬೇಡ್ಕರ್ ಮತ್ತು ಸಂವಿಧಾನ ಕುರಿತು ಗೀತಾ ಗಾಯನ ನಡೆಯಲಿದೆ. ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ಪ್ರೊ. ಹೆಚ್.ಎ. ಭಿಕ್ಷಾವರ್ತಿಮಠ, ವಿಷಯ ಪ್ರವೇಶ ಹಿರಿಯ ಸಾಹಿತಿ ಪ್ರೊ. ಸಿ.ವಿ. ಪಾಟೀಲ್, ವಿಶೇಷ ಉಪನ್ಯಾಸ ಸಂಶೋಧಕ ಡಾ. ವಡ್ಡಿಗೆರೆ ನಾಗರಾಜಯ್ಯ, ಡಾ. ಹೊನ್ನಪ್ಪ, ಗೌರವ ಉಪಸ್ಥಿತಿ ಇನ್‌ಸೈಟ್ ಸಂಸ್ಥಾಪಕ ಜಿ.ಬಿ. ವಿನಯಕುಮಾರ್, ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಎನ್. ರುದ್ರಮುನಿ, ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ, ಹಿರಿಯ ಕ್ರೀಡಾಪಟು ಹೆಚ್. ನಿಜಗುಣ, ಪತ್ರಕರ್ತ ಟಿ. ಇನಾಯತ್ ಉಲ್ಲಾ, ಹೆಚ್. ಮಲ್ಲಿಕಾರ್ಜುನ್ ಹರಪನಹಳ್ಳಿ, ಕನ್ನಡ ನಾಡು-ನುಡಿ ಕವಿತೆಗಳು ಹಾಗೂ ಡಾ. ಅಂಬೇಡ್ಕರ್ ಸಂವಿಧಾನ ಕುರಿತು ಗೀತಾ ಗಾಯನ ನಡೆಸಿಕೊಡುವವರು ಹೆಗ್ಗೆರೆ ರಂಗಪ್ಪ, ಪರಮೇಶ್ವರಪ್ಪ ಕತ್ತಿಗೆ, ಅಂಜಿನಪ್ಪ ಲೋಕಿಕೇರಿ, ವೀರೇಶ್ ಕುಮಾರ್.

ಕವಿಗೋಷ್ಠಿ ಅಧ್ಯಕ್ಷತೆ ಬಂಡಾಯ ಕವಿ ಜೆ. ಕಲಿಂ ಬಾಷಾ, ಆಶಯ ನುಡಿ ಜಿಲ್ಲಾ ಮಾಜಿ ಕಸಾಪ ಅಧ್ಯಕ್ಷ ಎಸ್.ಹೆಚ್. ಹೂಗಾರ್ ಹದಿನಾಲ್ಕು ಕವಿಗಳು ಕವನವನ್ನು ವಾಚಿಸಲಿದ್ದಾರೆ.

## ಸಾಲಕಟ್ಟೆಯಲ್ಲಿ ಇಂದು ಸಾಮೂಹಿಕ ಸತ್ಯನಾರಾಯಣ ಪೂಜೆ, ಧಾರ್ಮಿಕ ಸಭೆ

ಮಲೇಬೆನ್ನೂರು ಸಮೀಪದ ಸಾಲಕಟ್ಟೆ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೆ.ಬೇವಿನಹಳ್ಳಿ ವಲಯದ ಪ್ರಗತಿ ಬಂಧು ಸ್ವ-ಸಹಾಯ ಸಂಘಗಳ ಒಕ್ಕೂಟಗಳು ಹಾಗೂ ಶ್ರೀ ಈಶ್ವರ ಸಾಮೂಹಿಕ ಶ್ರೀ ಸತ್ಯ ನಾರಾಯಣ ಪೂಜಾ ಸಮಿತಿ ಸಾಲಕಟ್ಟೆ ಇವರುಗಳ ವತಿಯಿಂದ ಇಂದು ಬೆಳಿಗ್ಗೆ 7 ಗಂಟೆಗೆ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಮತ್ತು 11 ಗಂಟೆಗೆ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಉದ್ಘಾಟನೆ : ಬಿ.ಪಿ.ಹರೀಶ್. ಉಪನ್ಯಾಸ : ಹೆಚ್.ಬಿ.ಮಂಜುನಾಥ್, ಅಧ್ಯಕ್ಷತೆ : ಎಂ.ಜಿ.ರಾಜಶೇಖರಪ್ಪ, ಮುಖ್ಯ ಅತಿಥಿಗಳು : ಶ್ರೀಮತಿ ಗೀತಾ, ಎಂ.ಲಕ್ಷ್ಮಣ, ಶ್ರೀಮತಿ ಜ್ಯೋತಿ ನಾಗರಾಜ್, ಹೆಚ್.ಎಸ್.ಶಿವಶಂಕರ್, ಎಸ್.ರಾಮಪ್ಪ, ನಂದಿಗಾವಿ ಶ್ರೀನಿವಾಸ್, ಜಿ.ಮಂಜುನಾಥ್ ಪಟೇಲ್ ಬಿ.ರಾಜಣ್ಣ, ಡಿ.ಎಂ.ಹಾಲಸ್ವಾಮಿ, ಕೆ.ಯೋಗಪ್ಪ.

## ಆನೆಕೊಂಡದಲ್ಲಿ ನಾಳೆ ಕಾರ್ತಿಕ

ದಾವಣಗೆರೆ,ಡಿ.23-ಇಲ್ಲಿಗೆ ಸಮೀಪದ ಶ್ರೀ ಕ್ಷೇತ್ರ ಆನೆಕೊಂಡ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 26ರ ಮಂಗಳವಾರ ರಾತ್ರಿ 8 ಗಂಟೆಗೆ ಕಾರ್ತಿಕ ದೀಪೋತ್ಸವ ನಡೆಯಲಿದೆ ಎಂದು ದೇವಸ್ಥಾನದ ಕನ್ವೀನರ್ ಗೌಡ್ರ ಅಜ್ಜಪ್ಪ ತಿಳಿಸಿದ್ದಾರೆ.




## ಮಲ್ಲೇಶ್ ಎಂ. ನಿಧನ

ದಾವಣಗೆರೆ ಕೆಟಿಜೆ ನಗರ, 10ನೇ ಕ್ರಾಸ್ ವಾಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿಬ್ಬಂದಿಯಾದ

**ಮಲ್ಲೇಶ್ ಎಂ. ಬಳ್ಳಾರಿ (59)**

ಇವರು ದಿನಾಂಕ 23.12.2023ರ ಶನಿವಾರ ಸಂಜೆ 4.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24.12.2023ರ 24.12.2023ರ ಭಾನುವಾರ ಸಂಜೆ 4 ಕ್ಕೆ ನಗರದ ಆರ್ ಹೆಚ್. ಬೃಂದಾವನದಲ್ಲಿ ನೇರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ : 95389 44267, 96202 58840**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 23-12-2023ರಂದು ನಿಧನರಾದ ಶ್ರೀ ಜಗದ್ಗುರು ಮುರುಘರಾಜೇಂದ್ರ ಟ್ರಸ್ಟ್ ಮಾಜಿ ಕಾರ್ಯದರ್ಶಿಗಳೂ, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಮಾಜಿ ನಿರ್ದೇಶಕರೂ, ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಮಾಜಿ ನಿರ್ದೇಶಕರೂ ಆಗಿದ್ದ


**ಶ್ರೀ ಕಂಚಿಕೆರೆ ವಿರುಪಾಕ್ಷಪ್ಪ** ಅವರಿಗೆ

ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥನೆ

**ಅಜ್ಜಂಪುರ ಶೆಟ್ರು ವಿಜಯಕುಮಾರ್**

ನಿರ್ದೇಶಕರು, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್
ನಿರ್ದೇಶಕರು, ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ


## ನಗರದ ಶ್ರೀ ರಾಘವೇಂದ್ರ ಮಠದಲ್ಲಿ ಇಂದು ಕಾರ್ತಿಕ ದೀಪೋತ್ಸವ



ಕೆ.ಬಿ. ಬಡಾವಣೆ ದೀಕ್ಷಿತ್ ರಸ್ತೆಯಲ್ಲಿರವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಇಂದು ಬೆಳಿಗ್ಗೆ 5.30 ರಿಂದ ಕಡೇ ಕಾರ್ತಿಕೋತ್ಸವ ದೀಪೋತ್ಸವ ನಡೆಯಲಿದೆ. ಸಂಜೆ 5.30ಕ್ಕೆ ದೀವಟಿಗೆ ಸೇವೆ, 5.45ಕ್ಕೆ ಸೇವಾ ಸಂಕಲ್ಪ, 6ಕ್ಕೆ ರಾಜಬೀದಿಗಳಲ್ಲಿ ಸಾಲಿ ದೀಪಗಳೊಂದಿಗೆ ಪಲ್ಲಕ್ಕಿ ಉತ್ಸವ, 7ಕ್ಕೆ ಶ್ರೀಮಠದಲ್ಲಿ ಪ್ರಕಾರ ರಥೋತ್ಸವ, ಅಷ್ಟವಧಾನ, ಮಹಾಮಂಗಳಾರತಿ ಮತ್ತು 8 ಗಂಟೆಗೆ ಪ್ರಸಾದ ವಿನಿಯೋಗ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 9845982403, 9535483391, 9480798088.



## ದೊಡ್ಡಬಾತಿಯಲ್ಲಿ ನಾಳೆ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ಕಾರ್ತಿಕ

ದಾವಣಗೆರೆ,ಡಿ.23- ದೊಡ್ಡಬಾತಿ ಗ್ರಾಮದ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ಕಾರ್ತಿಕೋತ್ಸವ ನಾಡಿದ್ದು ದಿನಾಂಕ 25ರ ಸೋಮವಾರ ರಾತ್ರಿ 7:30ಕ್ಕೆ ಜರುಗಲಿದೆ.

## ಇಂದು ರಶ್ಮಿ ಶಾಲಾ ರಜತ ಮಹೋತ್ಸವ

ರಶ್ಮಿ ಹೆಣ್ಣು ಮಕ್ಕಳ ಉಚಿತ ವಸತಿಯುತ ಶಾಲೆಯ ರಜತ ಮಹೋತ್ಸವ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30 ಕ್ಕೆ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ರಶ್ಮಿ ಶಾಲೆಯ ಅಧ್ಯಕ್ಷರಾದ ಅರುಣ ಪರಮೇಶ್ವರಪ್ಪ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಚಿಂತಕರಾದ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ಡಾ.ಪ್ರಭಾ ಮಲ್ಲಿಕಾರ್ಜುನ್ ಆಗಮಿಸಲಿದ್ದಾರೆ.

## ಹರಿಹರ ವಕೀಲರ ಸಂಘಕ್ಕೆ ಚುನಾವಣೆ

ಹರಿಹರ, ಡಿ,23- ವಕೀಲರ ಸಂಘದ ಹಿರಿಯರ ಮಾತಿಗೆ ಮನ್ನಣೆ ಕೊಟ್ಟು ವಕೀಲ ಬಿ. ಆನಂದ್ ರವರಿಗೆ ಬೆಂಬಲ ಸೂಚಿಸಿ ಚುನಾವಣಾ ಕಣದಿಂದ ನಿವೃತ್ತಿ ಘೋಷಣೆ ಮಾಡಿರುವುದಾಗಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ಹೆಚ್.ಹೆಚ್. ಲಿಂಗರಾಜ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಇದೇ ದಿನಾಂಕ 30 ರಂದು ನಡೆಯಲಿರುವ ಚುನಾವಣೆ ಪಕ್ರಿಯೆಗಳು ಸಂಪೂರ್ಣವಾಗಿ ನಡೆದು ಆ ನಂತರ ಚುನಾವಣಾಧಿಕಾರಿಗಳು ಯಾವ ವ್ಯಕ್ತಿ ಆಯ್ಕೆಯಾಗಿದ್ದಾರೆ ಎಂದು ಘೋಷಣೆ ಮಾಡುತ್ತಾರೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ತಾವು ನಿವೃತ್ತಿ ಘೋಷಣೆ ಮಾಡಿದ್ದೇನೆಯೇ ವಿನಃ ಚುನಾವಣಾ ಕಣದಿಂದ ನಾಮಪತ್ರವನ್ನು ವಾಪಸ್ ಪಡೆದಿರುವುದಿಲ್ಲ ಎಂದು ಲಿಂಗರಾಜ್ ಸ್ಪಷ್ಟನೆ ನೀಡಿದ್ದಾರೆ.

## ನಗರದಲ್ಲಿ ಇಂದು ಶ್ರೀ ವೆಂಕಟೇಶ್ವರ ಸ್ವಾಮಿ ಅಶ್ವ ಉತ್ಸವ

ಬೇತೂರು ರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವವು ನಾಳೆ ಸೋಮವಾರ ಮಧ್ಯಾಹ್ನ 3:30 ಕ್ಕೆ ಶ್ರೀ ವೆಂಕಟೇಶ್ವರ ಸಮುದಾಯ ಭವನದಲ್ಲಿ ನಡೆಯಲಿದೆ. ಇಂದು ಅಶ್ವ ಉತ್ಸವ ನಡೆಯಲಿದೆ.

## ಎಸ್ಸೆಸ್‌ಗೆ ಬಂಟರ ಸಮುದಾಯ ಗೌರವ



ದಾವಣಗೆರೆ, ಡಿ. 23 - ಅಖಿಲ ಭಾರತ ವೀರಶೈವ-ಲಿಂಗಾಯಿತ ಮಹಾಸಭಾದ 24ನೇ ಮಹಾಧಿವೇಶನ ಅಂಗವಾಗಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರು ಸಾರೋಟ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಜಿಲ್ಲಾ ಬಂಟರ ಸಮುದಾಯದವರು ಎಸ್ಸೆಸ್ ಅವರನ್ನು ಗೌರವಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಂಟರ ಸಮುದಾಯದ ಮುಖಂಡರುಗಳಾದ ದಿನೇಶ್ ಕೆ. ಶೆಟ್ಟಿ, ಉಮೇಶ್ ಶೆಟ್ಟಿ, ಬೇಳೂರು ಸಂತೋಷ್ ಕುಮಾರ್ ಶೆಟ್ಟಿ, ಶ್ರೀಮತಿ ಲತಿಕಾ ಶೆಟ್ಟಿ, ಅಕ್ಷಯ್ ಶೆಟ್ಟಿ, ಡಾ. ಶುಕ್ಲಾಶೆಟ್ಟಿ ಮತ್ತಿತರರಿದ್ದರು.

## ಎಸ್ಸೆಸ್‌ಗೆ ಈಡಿಗ ಸಮುದಾಯದ ಗೌರವ



ದಾವಣಗೆರೆ, ಡಿ. 23 - ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ 24ನೇ ಮಹಾಧಿವೇಶನ ಅಂಗವಾಗಿ ಏರ್ಪಾಡಾಗಿದ್ದ ಸಾರೋಟ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರನ್ನು ಜಿಲ್ಲಾ ಈಡಿಗ ಸಮುದಾಯದವರು ಎಸ್ಸೆಸ್ ಅವರನ್ನು ಗೌರವಿಸಿದರು.

ವೀರಶೈವ-ಲಿಂಗಾಯತ ಮಹಾಸಭಾದ ಮಹಾಧಿವೇಶನವು ತಮ್ಮ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಲೆಂದು ಈಡಿಗ ಸಮುದಾಯದವರು ಎಸ್ಸೆಸ್ ಅವರಿಗೆ ಈಡಿಗ ಸಮುದಾಯ ಶುಭ ಹಾರೈಸಿತು.

ಈ ಸಂದರ್ಭದಲ್ಲಿ ಜಿಲ್ಲಾ ಈಡಿಗ ಸಮುದಾಯದ ಅಧ್ಯಕ್ಷ ಹೆಚ್.ಶಂಕರ್, ಪ್ರಧಾನ ಕಾರ್ಯದರ್ಶಿ ಎ.ನಾಗರಾಜ್, ರವೀಂದ್ರಬಾಬು, ಜಯಪ್ರಕಾಶ್, ಮಹಾಬಲೇಶ್, ರಾಜು ಮತ್ತಿತರರಿದ್ದರು.

## ನಾಳೆ ದಾನಮ್ಮ ದೇವಿ ಕಾರ್ತೀಕೋತ್ಸವ



ದಾವಣಗೆರೆ, ಡಿ. 23- ದೊಡ್ಡಪೇಟೆ ಶ್ರೀ ಬಸವೇಶ್ವರ ದಾನಮ್ಮ ದೇವಿ ಕಾರ್ತೀಕೋತ್ಸವವು ನಾಡಿದ್ದು ದಿನಾಂಕ 25ರ ಸೋಮವಾರ ಸಂಜೆ 8 ಗಂಟೆಗೆ ಜರುಗಲಿದೆ ಎಂದು ದೇವಸ್ಥಾನದವರು ತಿಳಿಸಿದ್ದಾರೆ.

## ಎಲೇಬೇತೂರು : ನಾಳೆ ಕಾರ್ತೀಕ

ದಾವಣಗೆರೆ, ಡಿ. 23- ತಾಲ್ಲೂಕಿನ ಎಲೇಬೇತೂರು ಗ್ರಾಮದ ಶ್ರೀ ಸವಗದ್ದಿಗೆ ಸಂಗಮೇಶ್ವರ ಮಹಾಸ್ವಾಮಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 25ರ ಸೋಮವಾರ ಕಾರ್ತೀಕೋತ್ಸವ ನಡೆಯಲಿದೆ.

## ಕೊಟ್ಟೂರಿನಲ್ಲಿ ನಾಳೆ ಕಾರ್ತಿಕ

ಕೊಟ್ಟೂರು,ಡಿ.23- ಕೊಟ್ಟೂರಿನ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 25ರ ಸೋಮವಾರ ರಾತ್ರಿ ಕಾರ್ತಿಕೋತ್ಸವ ನಡೆಯಲಿದೆ ಎಂದು ದೇವಸ್ಥಾನದ ಕಾರ್ಯ ನಿರ್ವಾಹಕ ಅಧಿಕಾರಿ ಎಂ. ಕೃಷ್ಣಪ್ಪ ತಿಳಿಸಿದ್ದಾರೆ.

# ವರ್ತಕ ಕಂಚಿಕೆರೆ ವಿರುಪಾಕ್ಷಪ್ಪ ನಿಧನ



ದಾವಣಗೆರೆ, ಡಿ. 23 - ನಗರದ ವ್ಯಾಪಾರೋದ್ಯಮಿಗಳೂ, ಸಾಮಾಜಿಕ ಸೇವಾ ಕಾರ್ಯಕರ್ತರೂ ಆದ ಕಂಚಿಕೆರೆ ವಿರುಪಾಕ್ಷಪ್ಪ ಅವರು ಇಂದು ರಾತ್ರಿ 9 ಗಂಟೆಗೆ ನಿಧನರಾದರು. ಮೃತರಿಗೆ ಸುಮಾರು 77 ವರ್ಷ ವಯಸ್ಸಾಗಿತ್ತು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಟ್ರಸ್ಟ್ ಮಾಜಿ ಕಾರ್ಯದರ್ಶಿಗಳೂ, ಮುರುಘರಾಜೇಂದ್ರ ವಿದ್ಯಾವರ್ಧಕ ಫಂಡ್ ಸಂಘದ ಮಾಜಿ ಕಾರ್ಯದರ್ಶಿಗಳೂ, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಮಾಜಿ ನಿರ್ದೇಶಕರೂ, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಮಾಜಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ವಿರುಪಾಕ್ಷಪ್ಪ ಅವರು ವಿವಿಧ ಸಾಮಾಜಿಕ ಸಂಸ್ಥೆಗಳಲ್ಲಿ ಸಕ್ರಿಯ ಕಾರ್ಯಕರ್ತರಾಗಿದ್ದರು.

ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು - ಬಳಗವನ್ನು ಅಗಲಿದ್ದಾರೆ. ಕಂಚಿಕೆರೆ ವಿರೂಪಾಕ್ಷಪ್ಪನವರ ಪಾರ್ಥಿವ ಶರೀರವನ್ನು ನಾಳೆ ದಿನಾಂಕ 24ರ ಭಾನುವಾರ ಬೆಳಿಗ್ಗೆ 10 ರಿಂದ 12ರ ವರೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ ಶಿವಯೋಗಾಶ್ರಮದ ಆವರಣದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ನಂತರ ಮಧ್ಯಾಹ್ನ 1 ಗಂಟೆಗೆ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಅವರ ಕುಟುಂಬ ವರ್ಗದವರು ತಿಳಿಸಿದ್ದಾರೆ.

**ಶೋಕ :** ಕಂಚಿಕೆರೆ ವಿರುಪಾಕ್ಷಪ್ಪ ಅವರ ನಿಧನಕ್ಕೆ ಶ್ರೀ ಶಿವಮೂರ್ತಿ ಮುರುಘಾ ಶರಣರು, ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಮುರುಘರಾಜೇಂದ್ರ ವಿದ್ಯಾವರ್ಧಕ ಫಂಡ್ ಸಂಘದ ಕಾರ್ಯದರ್ಶಿ ಎಂ. ಜಯಕುಮಾರ್, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್, ಮುರುಘರಾಜೇಂದ್ರ ವಿದ್ಯಾವರ್ಧಕ ಫಂಡ್ ಸಂಘ, ವಿರಕ್ತಮಠದ ಧರ್ಮದರ್ಶಿಗಳ ಸಮಿತಿ ಪದಾಧಿಕಾರಿಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

ಭಾನುವಾರ, ಡಿಸೆಂಬರ್ 24, 2023

☎ 08192 254736 ✆ 91642 99999

## ರಾಷ್ಟ್ರಮಟ್ಟದಲ್ಲಿ 'ಬೆಣ್ಣೆದೋಸೆ'ಗೆ ಬ್ರ್ಯಾಂಡಿಂಗ್



ದಾವಣಗೆರೆ, ಡಿ.23- ದಾವಣಗೆರೆ ಬೆಣ್ಣೆ ದೋಸೆಯನ್ನು ರಾಷ್ಟ್ರಮಟ್ಟದಲ್ಲಿ ಜನಪ್ರಿಯಗೊಳಿಸಲು ಹಾಗೂ ದೋಸೆಯ ಸಾಂಪ್ರದಾಯಿಕತೆ ಉಳಿಸುವ ಮೂಲಕ ಗುಣಮಟ್ಟ ಕಾಪಾಡಿಕೊಂಡು ಬ್ರ್ಯಾಂಡಿಂಗ್ ಕಲ್ಪಿಸುವುದು ಈ ದೋಸೋತ್ಸವದ ಮುಖ್ಯ ಉದ್ದೇಶವಾಗಿದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಶನಿವಾರ ಜಿಲ್ಲಾಡಳಿತದ ವತಿಯಿಂದ ನಗರದ ಎಂ.ಬಿ.ಎ ಕಾಲೇಜು ಮೈದಾನ ಮತ್ತು ಗ್ಲಾಸ್ ಹೌಸ್ ಮುಂಭಾಗದಲ್ಲಿ ಆಯೋಜಿಸಲಾದ ದೋಸೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದಾವಣಗೆರೆ ಬೆಣ್ಣೆ ದೋಸೆ ಇತಿಹಾಸ ಪ್ರಸಿದ್ಧವಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ದೋಸೆಯನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಇಂದಿನಿಂದ ಡಿಸೆಂಬರ್ 25 ರವರೆಗೆ ದೋಸೋತ್ಸವ ಏರ್ಪಡಿಸಲಾಗಿದೆ.

ಕಳೆದ ನಾಲ್ಕು ದಶಕಗಳಿಂದ ಬೆಣ್ಣೆ ದೋಸೆ ಮಾರಾಟ ಮಾಡುತ್ತಿರುವ ಅಂಗಡಿ ಮಾಲೀಕರ ಮುಖಾಂತರ ಸಾರ್ವಜನಿಕರಿಗೆ ಗುಣಮಟ್ಟದ ಬೆಣ್ಣೆ (5ನೇ ಪುಟಕ್ಕೆ)

## ಹಿಜಾಬ್ ನಿಷೇಧ ವಾಪಸ್ : ಸಿಎಂ

ಮೈಸೂರು, ಡಿ. 23 - ಹಿಜಾಬ್ ನಿಷೇಧ ವಾಪಸ್ ಪಡೆಯುವುದಾಗಿ ನಿನ್ನೆಯಷ್ಟೇ ಹೇಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಮಾತು ಬದಲಿಸಿದ್ದಾರೆ.

ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸುವುದರ ಮೇಲಿನ ನಿಷೇಧವನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ ಮತ್ತು ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಸಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಇಲ್ಲಿ ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ಅವರು, ನಾವು ಇನ್ನೂ ಹಿಜಾಬ್ ನಿಷೇಧ ವಾಪಸ್ ಪಡೆದಿಲ್ಲ. ಯಾರೋ ನನಗೆ ಹಿಜಾಬ್ ನಿಷೇಧ ತೆಗೆದುಹಾಕುವ ಬಗ್ಗೆ ಪ್ರಶ್ನೆಯನ್ನು ಕೇಳಿದರು. ಹಿಜಾಬ್ (5ನೇ ಪುಟಕ್ಕೆ)



**ತರಳಬಾಳು, ಶ್ರೀಶೈಲ ಜಗದ್ಗುರುಗಳ ಕುಶಲೋಪರಿ ವಿನಿಮಯ**

ದಾವಣಗೆರೆಯಲ್ಲಿ ಶನಿವಾರ ಏರ್ಪಾಡಾಗಿದ್ದ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಾ ಅಧಿವೇಶನದಲ್ಲಿ ಪಾಲ್ಗೊಂಡಿದ್ದ ತರಳಬಾಳು ಬೃಹನ್ಮಠದ ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಮತ್ತು ಶ್ರೀಶೈಲ ಪೀಠದ ಜಗದ್ಗುರು ಶ್ರೀ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಕುಶಲೋಪರಿ ವಿನಿಮಯ ಮಾಡಿಕೊಂಡ ಸಂದರ್ಭ.



# ನಿಖರ ಗಣತಿ, ಒ.ಬಿ.ಸಿ. ಮೀಸಲಾತಿ

## ವೀರಶೈವ-ಲಿಂಗಾಯತ ಮಹಾಸಭಾ ಮಹಾ ಅಧಿವೇಶನದಲ್ಲಿ ಕೇಳಿ ಬಂದ ಆಗ್ರಹ

ದಾವಣಗೆರೆ, ಡಿ. 23 - ವೀರಶೈವ ಲಿಂಗಾಯತ ಸಮುದಾಯದ ನಿಖರ ಜನಸಂಖ್ಯೆ ಗುರುತಿಸಬೇಕು, ಒಳಪಂಗಡಗಳನ್ನು ಬದಿಗೊತ್ತಿ ಒಗ್ಗಟ್ಟು ಹೊಂದಬೇಕು, ಕೇಂದ್ರದಲ್ಲಿ ಒ.ಬಿ.ಸಿ. ಮೀಸಲಾತಿ ಪಡೆಯಬೇಕು, ಸಮಾಜ ಒಡೆಯುವ ಪ್ರಯತ್ನವನ್ನು ತಡೆಯಬೇಕು.

ಇದು ನಗರದ ಬಾಪೂಜಿ ಎಂ.ಬಿ.ಎ. ಕಾಲೇಜು ಮೈದಾನದಲ್ಲಿ ನಡೆದ ಅಖಿಲ ಭಾರತ ವೀರಶೈವ - ಲಿಂಗಾಯತ ಮಹಸಭಾದ 24ನೇ ಮಹಾ ಅಧಿವೇಶನದ ಉದ್ಘಾಟನಾ ಸಮಾರಂಭದಲ್ಲಿ ಪ್ರಸ್ತಾಪಿಸಲಾದ ವಿಷಯಗಳು.

ವೀರಶೈವ ಲಿಂಗಾಯತ ಸಮುದಾಯದ ಬಹಳಷ್ಟು ಜನರು ಹಿಂದುಳಿದಿದ್ದಾರೆ. ಕೆಲವೇ ಜನರು ಉನ್ನತ ಮಟ್ಟದಲ್ಲಿದ್ದಾರೆ ಎಂಬ ಕಾರಣಕ್ಕಾಗಿ ಸಮಾಜದ ಬಡವರಿಗೆ ಮೀಸಲಾತಿ ಸೌಲಭ್ಯ ನಿರಾಕರಿಸಬಾರದು ಎಂಬ ಒತ್ತಾಯ ಕೇಳಿ ಬಂತು.

ಕಾಂತರಾಜ್ ಆಯೋಗದ ಸಮೀಕ್ಷಾ ವರದಿಯಲ್ಲಿ ವೀರಶೈವ - ಲಿಂಗಾಯತ ಸಮುದಾಯದ ಸದಸ್ಯರನ್ನು ಕಡಿಮೆಯಾಗಿ ತೋರಿಸಿರುವ ಬಗ್ಗೆ ಮುಖಂಡರು ಆಕ್ಷೇಪಿಸಿದರಲ್ಲದೇ, ಸಮರ್ಪಕ ಹಾಗೂ ವೈಜ್ಞಾನಿಕ ಜನಗಣತಿ ನಡೆಸಬೇಕು ಎಂದು ಆಗ್ರಹಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಹಿರಿಯ ಶಾಸಕ ಹಾಗೂ ಅಖಿಲ ಭಾರತ ವೀರಶೈವ - ಲಿಂಗಾಯತ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಹಲವಾರು ವರ್ಷಗಳಿಂದ ನಮ್ಮ ಸಮಾಜವನ್ನು ವಿಘಟಿಸುವ - ವಿಭಜಿಸುವ ಹಲವಾರು ಪ್ರಯತ್ನ ನಡೆದಿವೆ. ಸಮಾಜದ ವಿಘಟನೆಗೆ ಅವಕಾಶ ಮಹಾಸಭಾ ನೀಡಿಲ್ಲ. ಇನ್ನು ಮುಂದೆಯೂ ಅದಕ್ಕೆ ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸುತ್ತೂರಿನ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮಾಜದಲ್ಲಿ ಈಗ ಆತ್ಮವಿಮರ್ಶೆ (5ನೇ ಪುಟಕ್ಕೆ)

### ವರ್ಣಗಳಾಗಿ ಲಿಂಗಾಯತ ವಿಭಜಿಸುವ ಹುನ್ನಾರ ನಡೆದಿತ್ತು: ತರಳಬಾಳು ಜಗದ್ಗುರು



ಲಿಂಗಾಯತ ಧರ್ಮಗಳನ್ನು ನಾಲ್ಕು ವರ್ಣಗಳಾಗಿ ವಿಭಜಿಸುವ ಹುನ್ನಾರ ಶತಮಾನದ ಹಿಂದೆ ನಡೆದ ವೀರಶೈವ ಲಿಂಗಾಯತ ಮಹಾಸಭಾ ಅಧಿವೇಶನದಲ್ಲಿ ನಡೆದಿತ್ತು ಎಂದು ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

1909ರಲ್ಲಿ ನಡೆದ ಅಧಿವೇಶನದಲ್ಲಿ ಹಿಂದೂ ಧರ್ಮದ ರೀತಿಯಲ್ಲೇ ಲಿಂಗಾಯತರ ಪಂಗಡಗಳನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರರೆಂದು ವಿಭಜಿ ಸುವ ನಿರ್ಣಯಕ್ಕೆ ಸಿದ್ಧತೆ ನಡೆದಿತ್ತು ಎಂದವರು ಹೇಳಿದರು.

ಆದರೆ, ನಮ್ಮ ಮಠದ ಭಕ್ತರಾಗಿದ್ದ ಮೈಸೂರು ಬಸವಯ್ಯ ಈ ಪ್ರಸ್ತಾಪವನ್ನು ವಿರೋಧಿಸಿ ತಡೆದರು. ಅಷ್ಟೇ (5ನೇ ಪುಟಕ್ಕೆ)

### ವೀರಶೈವ ಸಮಾಜಕ್ಕೆ '856' ಸಂಖ್ಯಾ ಲಾಂಛನ

**ವೀರಶೈವ ಸಮಾಜವು 856 ಸಂಖ್ಯಾ ಲಾಂಛನ ಹೊಂದಬೇಕು ಎಂದು ಶ್ರೀಶೈಲ ಜಗದ್ಗುರು ಶ್ರೀ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಪ್ರತಿಪಾದಿಸಿದರು.**
**ವೀರಶೈವ ಧರ್ಮದಲ್ಲಿ ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಳಗಳಿವೆ. ಇದರ ಸೂಚಕವಾಗಿ 856 ಸಂಖ್ಯೆ ಬಳಕೆಯಾಗಬೇಕಿದೆ. ವೀರಶೈವ - ಲಿಂಗಾಯತ ಮಹಾಸಭಾ** (5ನೇ ಪುಟಕ್ಕೆ)

### ಜನಸಂಖ್ಯೆ ಇಳಿಕೆಗೆ ಒಳಪಂಗಡ ಬಳಕೆ ಕಾರಣ

ವೀರಶೈವ ಲಿಂಗಾಯತ ಸಮಾಜದವರು ಸರ್ಕಾರದ ದಾಖಲೆಗಳಲ್ಲಿ ಉಪ ಪಂಗಡಗಳ ಹೆಸರುಗಳನ್ನು ಬಳಸುತ್ತಿದ್ದಾರೆ. ಇದರಿಂದಾಗಿ ಸರ್ಕಾರಿ ದಾಖಲೆಗಳಲ್ಲಿ ವೀರಶೈವ ಲಿಂಗಾಯತರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಹಲವಾರು ಸ್ವಾಮೀಜಿಗಳು ಹಾಗೂ ಮುಖಂಡರು ಅಭಿಪ್ರಾಯ ಪಟ್ಟರು. ಸರ್ಕಾರ ಇಡೀ ವೀರಶೈವ ಲಿಂಗಾಯತ ಸಮುದಾಯಕ್ಕೆ (5ನೇ ಪುಟಕ್ಕೆ)

### ವ್ಯಕ್ತಿನಿಂದನೆ ವಿರುದ್ಧವೂ ಕ್ರಮವಾಗಬೇಕು

ದಾವಣಗೆರೆ, ಡಿ. 23 - ಜಾತಿ ನಿಂದನೆ ಮಾಡಿದಾಗ ಅಟ್ರಾಸಿಟಿ ಪ್ರಕರಣ ದಾಖಲಿಸಿ ಕ್ರಮ ತೆಗೆದುಕೊಳ್ಳಲಾಗುತ್ತದೆ. ಅದೇ ರೀತಿ ವ್ಯಕ್ತಿ ನಿಂದನೆ ಮಾಡಿದಾಗಲೂ ಕ್ರಮ ತೆಗೆದು ಕೊಳ್ಳಲು ಕಾನೂನು ಜಾರಿಗೆ ತರುವ ಅಗತ್ಯವಿದೆ ಎಂದು ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯ ಪಟ್ಟರು. ನಗರದ ಎಂ.ಬಿ.ಎ. ಕಾಲೇಜು (5ನೇ ಪುಟಕ್ಕೆ)

### ಅಭಿವೃದ್ಧಿ ಹೊಂದಿದ ಸಮುದಾಯಕ್ಕೆ ಮೀಸಲಾತಿ

**ವೀರಶೈವ-ಲಿಂಗಾಯತರು ಹೊರಕ್ಕೆ**

ವೀರಶೈವ - ಲಿಂಗಾಯತರಿಗಿಂತಲೂ ಅಭಿವೃದ್ಧಿ ಹೊಂದಿರುವ ಹಲವು ಸಮುದಾಯಗಳು ಕೇಂದ್ರ ಸರ್ಕಾರದ ಒ.ಬಿ.ಸಿ. ಪಟ್ಟಿಯಲ್ಲಿವೆ. ಆದರೆ, ವೀರಶೈವ - ಲಿಂಗಾಯತ ಸಮಾಜ ಮಾತ್ರ ಮೀಸಲಾತಿಯಿಂದ ಹೊರಗಿದೆ ಎಂದು (5ನೇ ಪುಟಕ್ಕೆ)

## ಶೌಚಾಲಯ ಶುಚಿಗೊಳಿಸಲು ವಿದ್ಯಾರ್ಥಿಗಳ ಬಳಸದಂತೆ ನಿಷೇಧ

ಬೆಂಗಳೂರು, ಡಿ. 23 - ಶಾಲಾ - ಶೌಚಾಲಯಗಳನ್ನು ಶುಚಿಗೊಳಿಸಲು ವಿದ್ಯಾರ್ಥಿಗಳನ್ನು ಬಳಸದಂತೆ ಸರ್ಕಾರ ನಿಷೇಧಿಸಿದೆ.

ಸರ್ಕಾರಿ ಶಿಕ್ಷಣ ಸಂಸ್ಥೆ ಹಾಗೂ ವಿವಿಧ ಇಲಾಖೆಗಳಡಿ ಬರುವ ವಿದ್ಯಾರ್ಥಿನಿಲಯಗಳಲ್ಲಿ ಶೌಚಾಲಯ ಮತ್ತು ಆವರಣ ಶುಚಿತ್ವ ಕಾಪಾಡಲು ಪ್ರತ್ಯೇಕ ಸಿಬ್ಬಂದಿ ನೇಮಕ ಮಾಡಿಕೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಮುಖ್ಯಮಂತ್ರಿ ಅವರು, ಶಾಲೆಯ ಶೌಚಾಲಯಗಳನ್ನು ಶುಚಿಗೊಳಿಸಲು ವಿದ್ಯಾರ್ಥಿಗಳ ಬಳಕೆ ಅತ್ಯಂತ ಹೀನ ಕೃತ್ಯ ಎಂದಿದ್ದಾರೆ.

ಇಂತಹ ವ್ಯವಸ್ಥೆ ಸರ್ಕಾರ ನಿಷೇಧಿಸಿದೆ, ಇದನ್ನು ಮೀರಿ ಯಾವುದೇ ಶಾಲೆಗಳಲ್ಲಿ ಶೌಚಾಲಯ ಶುಚಿಗೊಳಿಸಿದರೆ ಅಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು.


ಈಗ ನಡೆದಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು ಶಿಸ್ತು ಕ್ರಮ ಕೈಗೊಂಡಿದ್ದಾರೆ. ಶಾಲಾ-ಕಾಲೇಜು ಮತ್ತು ವಸತಿ ನಿಲಯಗಳ ಬಗ್ಗೆ ನಿಗಾ ವಹಿಸುವಂತೆ ಸಮಾಜ ಕಲ್ಯಾಣ ಮತ್ತು ಶಿಕ್ಷಣ ಸಚಿವರಿಗೆ ತಿಳಿಸಿದ್ದೇನೆ ಎಂದಿದ್ದಾರೆ.

ಪ್ರತಿಯೊಂದು ಶಾಲೆಯಲ್ಲಿಯೂ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇರುವುದರ ಜೊತೆಗೆ ಅವುಗಳನ್ನು ಪ್ರತಿದಿನ ಶುಚಿಗೊಳಿಸಲು ಸಿಬ್ಬಂದಿಗಳ ನೇಮಕ ಮಾಡಿಕೊಳ್ಳುವಂತೆ ಸಚಿವರಿಗೆ ಹೇಳಿದ್ದೇನೆ ಎಂದಿದ್ದಾರೆ.



## ದೇವನಗರಿಯಲ್ಲಿ ಶ್ರದ್ಧಾ-ಭಕ್ತಿಯ ವೈಕುಂಠ ಏಕಾದಶಿ

ದಾವಣಗೆರೆ, ಡಿ.23 - ನಗರದೆಲ್ಲೆಡೆ ವೈಕುಂಠ ಏಕಾದಶಿಯನ್ನು ಶ್ರದ್ಧಾ - ಭಕ್ತಿಯಿಂದ ಆಚರಿಸಲಾಯಿತು. ಏಕಾದಶಿ ಅಂಗವಾಗಿ ಶ್ರೀ ವೆಂಕಟೇಶ್ವರ ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳು ನಡೆದವು. ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ಇಡೀ ದಿನ ಶ್ರೀ ಸ್ವಾಮಿಯ ಅಖಂಡ ದರ್ಶನಕ್ಕೆ ಅನುವು ಮಾಡಿಕೊಡಲಾಗಿತ್ತು. ಭಕ್ತರು ಸರದಿ ಸಾಲಿನಲ್ಲಿ ನಿಂತು ಸ್ವಾಮಿಯ ದರ್ಶನ ಪಡೆದರು.



## ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 23-12-2023ರಂದು ನಿಧನರಾದ
ಶ್ರೀ ಜಗದ್ಗುರು ಮುರುಘರಾಜೇಂದ್ರ ಟ್ರಸ್ಟ್ ಮಾಜಿ ಕಾರ್ಯದರ್ಶಿಗಳೂ,
ಮುರುಘರಾಜೇಂದ್ರ ವಿದ್ಯಾವರ್ಧಕ ಫಂಡ್ ಸಂಘ ಮಾಜಿ ಕಾರ್ಯದರ್ಶಿಗಳೂ
ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಮಾಜಿ ನಿರ್ದೇಶಕರೂ,
ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್
ಮಾಜಿ ಉಪಾಧ್ಯಕ್ಷರೂ ಮತ್ತು ನಿರ್ದೇಶಕರೂ ಆಗಿದ್ದ

**ಶ್ರೀ ಕಂಚಿಕೆರೆ ವಿರುಪಾಕ್ಷಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಕುಟುಂಬ ವರ್ಗಕ್ಕೆ ಅವರ ಅಗಲಿಕೆಯ ದುಃಖವನ್ನು
ಭರಿಸುವ ಶಕ್ತಿಯನ್ನು ಕರುಣಿಸಲೆಂದು ಶ್ರೀ ಗುರು ಬಸವೇಶ್ವರರು
ಹಾಗೂ ಕರ್ತೃ ಶ್ರೀ ಗುರು ಮುರುಗೇಶನು
ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು ಮತ್ತು ನಿರ್ದೇಶಕ ಮಂಡಳಿ
**ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ (ರಿ.)**
ಶಿವಯೋಗಾಶ್ರಮ, ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತ, ದಾವಣಗೆರೆ.

ಅಧ್ಯಕ್ಷರು ಮತ್ತು ನಿರ್ದೇಶಕ ಮಂಡಳಿ
**ಮುರುಘರಾಜೇಂದ್ರ ವಿದ್ಯಾವರ್ಧಕ ಫಂಡ್ ಸಂಘ (ರಿ.)**
**ಜಯದೇವ ಹಾಸ್ಟೆಲ್**
ಶಿವಯೋಗಾಶ್ರಮ ಆವರಣ, ಡಾ|| ಬಿ.ಆರ್. ಅಂಬೇಡ್ಕರ್ ವೃತ್ತ, ದಾವಣಗೆರೆ.

**ಧರ್ಮದರ್ಶಿಗಳ ಸಮಿತಿ, ವಿರಕ್ತಮಠ,** ದೊಡ್ಡಪೇಟೆ, ದಾವಣಗೆರೆ.





## ಬೃಹತ್ ಮೆರವಣಿಗೆ

ದಾವಣಗೆರೆ, ಡಿ.23- ಅಖಿಲ ಭಾರತ ವೀರಶೈವ ಮಹಾಸಭಾದ 24ನೇ ಮಹಾ ಅಧಿವೇಶನದ ಅಂಗವಾಗಿ ನಗರದಲ್ಲಿ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ಶ್ರೀ ಸಿದ್ಧಗಂಗಾ ಮಠದ ಸಿದ್ಧಲಿಂಗೇಶ್ವರ ಸ್ವಾಮೀಜಿ, ಅಖಿಲ ಭಾರತ ವೀರಶೈ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಡಾ.ಶಾಮನೂರು ಶಿವಶಂಕರಪ್ಪ, ಸಚಿವ ಈಶ್ವರ್ ಖಂಡ್ರೆ, ರಾಷ್ಟ್ರೀಯ ಉಪಾಧ್ಯಕ್ಷರುಗಳಾದ ಅಥಣಿ ಎಸ್. ವೀರಣ್ಣ, ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್, ಉದ್ಯಮಿ ಬಿ.ಸಿ. ಉಮಾಪತಿ ಸೇರಿದಂತೆ ಹಲವರು ಮುಖಂಡರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಜಗದ್ಗುರು ರೇಣುಕಾಚಾರ್ಯರು, ಜಗಜ್ಯೋತಿ ಬಸವಣ್ಣ, ಹಾನಗಲ್ ಕುಮಾರ ಶ್ರೀಗಳು ಸೇರಿದಂತೆ ಶಿವಶರಣರ ಭಾವಚಿತ್ರದೊಂದಿಗೆ, ಶರಣರ ವೇಷಧಾರಿಗಳ ಮೆರವಣಿಗೆ, ಸ್ತಬ್ಧ ಚಿತ್ರಗಳು, ಆನೆಗಳು, ಪುರುಷ ಹಾಗೂ ಮಹಿಳಾ ಡೊಳ್ಳು ಕುಣಿತ, ಹುಲಿಕುಣಿತ, ವೀರಗಾಸೆ ಸೇರಿದಂತೆ ಹಲವಾರು ಜಾನಪದ ತಂಡಗಳು ಮೆರವಣಿಗೆಗೆ ಕಳೆ ತಂದಿದ್ದವು. ನಗರದ ಅಭಿನವ ರೇಣುಕಾ ಮಂದಿರದಿಂದ ಆರಂಭಗೊಂಡ ಮೆರವಣಿಗೆಯು ಎವಿಕೆ ರಸ್ತೆ ಮೂಲಕ ಅಧಿವೇಶನ ನಡೆಯುವ ಸ್ಥಳವಾದ ಎಂ.ಬಿ.ಎ. ಕಾಲೇಜು ಆವರಣಕ್ಕೆ ತಲುಪಿತು.

# ನಿಖರ ಗಣತಿ, ಒ.ಬಿ.ಸಿ. ಮೀಸಲಾತಿ

(3ನೇ ಪುಟದಿಂದ) ಆಗಬೇಕಿದೆ. ಪಕ್ಷಾತೀತವಾಗಿ ಒಮ್ಮತದಿಂದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಿದೆ. ಶಕ್ತಿಯುತ ಸಂಘಟನೆಯಿಂದ ಮಾತ್ರ ಸಮಾಜದ ಆಶೋತ್ತರ ಈಡೇರಿಸಲು ಸಾಧ್ಯ ಎಂದು ಹೇಳಿದರು.

ತರಳಬಾಳು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ವೀರಶೈವ ಅಧಃಪತನಕ್ಕೆ ವೀರಶೈವರೇ ಕಾರಣ. ಲಿಂಗಾಯತರ ಅಧಃಪತನಕ್ಕೂ ಲಿಂಗಾಯತರೇ ಕಾರಣ. ಒಂದೇ ಎಂಬ ಭಾವನೆ ಇದ್ದರೆ ಹೀಗೆಲ್ಲ ಆಗುತ್ತಿರಲಿಲ್ಲ ಎಂದರು.

ಸರ್ಕಾರ ಜಾತಿ ಗಣತಿ ನಡೆಸುವುದಕ್ಕೆ ಮೊದಲೇ ವೀರಶೈವ ಲಿಂಗಾಯತ ಮಹಾಸಭಾದ ಮೂಲಕ ಸಮಾಜದ ಗಣತಿ ಮಾಡಬೇಕು ಎಂದೂ ಅವರು ಒತ್ತಾಯಿಸಿದರು.

ಶ್ರೀಶೈಲ ಪೀಠದ ಜಗದ್ಗುರು ಶ್ರೀ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, 1990ರಲ್ಲಿ ಚಿನ್ನಪ್ಪರೆಡ್ಡಿ ಆಯೋಗದ ವರದಿಯಲ್ಲಿ ವೀರಶೈವ - ಲಿಂಗಾಯತರ ಜನಸಂಖ್ಯೆ ರಾಜ್ಯದ ಶೇ.17ರಷ್ಟಿದೆ ಎಂದು ತಿಳಿಸಲಾಗಿತ್ತು. ಆದರೆ, ಇತ್ತೀಚಿನ ಕಾಂತರಾಜ್ ವರದಿಯಲ್ಲಿ ಸಮುದಾಯದ ಸಂಖ್ಯೆ ಶೇ.10.66 ಎಂದು ತೋರಿಸಲಾಗಿದೆ ಎಂಬ ವರದಿಗಳಿವೆ ಎಂದು ಕಳವಳ ವ್ಯಕ್ತಪಡಿಸಿದರು. ಒಳಪಂಗಡಗಳ ಕಾರಣದಿಂದ ಸಮಾಜ ವಿಘಟನೆ ಆಗಿರುವುದೇ ಇದಕ್ಕೆ ಕಾರಣ. ಒಳಪಂಗಡ ಗಳ ಹೆಸರು ಏನೇ ಇದ್ದರೂ ನಾವು ವೀರಶೈವರು ಎಂಬುದು ಮರೆಯಬಾರದು. ಮಠಾಧೀಶರೂ ಸಹ ವೀರಶೈವ ಸಮಾಜವನ್ನು ಸಮಗ್ರ ದೃಷ್ಟಿಯಿಂದ ನೋಡಬೇಕು ಎಂದು ಹೇಳಿದರು.

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಮಾತನಾಡಿ, ಲಿಂಗಾಯತ ಒಳಪಂಗಡಗಳು ಈಗ ಬೇರೆ ಬೇರೆ ವರ್ಗಗಳಲ್ಲಿ ಮೀಸಲಾತಿ ಪಡೆಯುತ್ತಿವೆ. 16 ಪಂಗಡಗಳು ಕೇಂದ್ರದ ಒ.ಬಿ.ಸಿ. ಪಟ್ಟಿಯಲ್ಲಿದ್ದರೆ, ಉಳಿದವು ಹೊರಗಿವೆ. ಇದರಿಂದಾಗಿ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಎಂಬಂತಾಗಿದೆ ಎಂದರು. ಎಲ್ಲಾ ಲಿಂಗಾಯಿತರಿಗೂ ಒಂದೇ ರೀತಿಯ ಮೀಸಲಾತಿ ಕಲ್ಪಿಸಿದರೆ ಮಾತ್ರ, ಒಂದೇ ಎಂಬ ಭಾವನೆ ಬರಲಿದೆ. ತಾತ್ವಿಕವಾಗಿ ವೀರಶೈವ ಹಾಗೂ ಲಿಂಗಾಯತ ಎಂದೇನೇ ಇದ್ದರೂ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಒಂದಾಗಬೇಕಿದೆ ಎಂದು ಹೇಳಿದರು.

ಹುಬ್ಬಳ್ಳಿಯ ಮೂರು ಸಾವಿರ ಸಂಸ್ಥಾನ ಮಠದ ಶ್ರೀ ಗುರುಸಿದ್ಧ ರಾಜಯೋಗಿಂದ್ರ ಸ್ವಾಮೀಜಿ ಮಾತನಾಡಿ, ಹಾನಗಲ್ ಕುಮಾರಸ್ವಾಮಿಗಳು ಸಮಾಜದ ಅಭಿವೃದ್ಧಿಗೆ ಶ್ರಮಿಸಿದ್ದರು. ಸಮಾಜ ಶೈಕ್ಷಣಿಕವಾಗಿ ಮುಂದೆ ಬರಬೇಕೆಂಬ ಆಶಯ ಹೊಂದಿದ್ದರು. ಇದಕ್ಕಾಗಿಯೇ ಮಹಾಸಭಾ ಸ್ಥಾಪಿಸಿದರು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಹಾಸಭಾ ಮಹಾಪ್ರಧಾನ ಕಾರ್ಯದರ್ಶಿ ಹಾಗೂ ಸಚಿವ ಈಶ್ವರ ಖಂಡ್ರೆ, ಸಂಘಟನೆಯಿಂದ ಮಾತ್ರ ಶಕ್ತಿ ಸಿಗುತ್ತದೆ. ಶಕ್ತಿ ಇದ್ದಲ್ಲಿ ಮಾತ್ರ ಸಮಾಜಕ್ಕೆ ನ್ಯಾಯ ಸಿಗುತ್ತದೆ ಎಂದರು.

ನಾವು ಜಾತಿ ಗಣತಿ ವಿರೋಧಿಗಳಲ್ಲ. ಆದರೆ, ಜಾತಿ ಗಣತಿಯಲ್ಲಿ ವಾಸ್ತವಾಂಶ ಇರಬೇಕು. ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಒಳಪಂಗಡಗಳ ಸತ್ಯಾಸತ್ಯತೆ ತಿಳಿಯಬೇಕು ಎಂದರು.

ಕಾರ್ಯಕ್ರಮದ ವೇದಿಕೆ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ವೀರಶೈವ ಲಿಂಗಾಯತ ಸಮಾಜ ಇನ್ನಷ್ಟು ಬಲಿಷ್ಠವಾಗಬೇಕಿದೆ. ಶಿಕ್ಷಣ, ಉದ್ಯೋಗ ಸೇರಿದಂತೆ ಎಲ್ಲ ವಲಯಗಳಲ್ಲಿ ಪ್ರಗತಿ ಆಗಬೇಕಿದೆ. ಇದಕ್ಕಾಗಿ ಇನ್ನಷ್ಟು ಒಗ್ಗಟ್ಟು ಬೇಕಿದೆ. ಶತಮಾನಗಳಿಂದ ಸವಾಲುಗಳನ್ನು ಎದುರಿಸುತ್ತಲೇ ಸಮಾಜ ಸಮೃದ್ಧವಾಗಿದೆ ಎಂದರು.

ಸಮಾವೇಶದ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಅವೈಜ್ಞಾನಿಕವಾಗಿರುವ ಜಾತಿ ಗಣತಿಯನ್ನು ಒಪ್ಪುವುದಿಲ್ಲ. ಹೊಸದಾಗಿ ಜನಗಣತಿ ಆಗಬೇಕಿದೆ. ವೀರಶೈವ ಲಿಂಗಾಯತ ಸಮಾಜದ ಸಂಖ್ಯೆ ಕಡಿಮೆ ಮಾಡಿ ತೋರಿಸಿ ಲಾಭ ಎನ್ನುವುದು ಹಗಲು ಗನಸು ಎಂದರು.

ಕೇಂದ್ರ ಸರ್ಕಾರದ ನೇಮಕಾತಿಗಳಲ್ಲಿ ವೀರಶೈವ ಲಿಂಗಾಯತರಿಗೆ ಒ.ಬಿ.ಸಿ. ಮೀಸಲಾತಿ ಸಿಗಬೇಕಿದೆ. ವೀರಶೈವ ಸಮಾಜ ಈ ದಿಸೆಯಲ್ಲಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬೆಂಬಲ ನೀಡುವುದಾಗಿ ಹೇಳಿದರು.

ಮಹಾಸಭಾ ಉಪಾಧ್ಯಕ್ಷ ಅಥಣಿ ವೀರಣ್ಣ ಮಾತನಾಡಿ, ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ ಸ್ಮಾರಕ ನಿರ್ಮಾಣಕ್ಕೆ 5 ಕೋಟಿ ರೂ. ಬಿಡುಗಡೆಯಾಗಿದ್ದರೂ ಸಹ ಕಾಮಗಾರಿ ಆರಂಭವಾಗಿಲ್ಲ. ಈ ದಿಸೆಯಲ್ಲಿ ಗಮನ ಹರಿಸಬೇಕಿದೆ. ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕಿದೆ ಎಂದರು.

ಮಹಾಸಭಾ ಉಪಾಧ್ಯಕ್ಷ ಅಣಬೇರು ರಾಜಣ್ಣ ಮಾತನಾಡಿ, ವೀರಶೈವ ಲಿಂಗಾಯತರು ಹೋರಾಟ ನಡೆಸಿದರೆ ಮಾತ್ರ ಒ.ಬಿ.ಸಿ. ಸ್ಥಾನ ಪಡೆಯಲು ಸಾಧ್ಯ. ಈ ದಿಸೆಯಲ್ಲಿ ಮಠಾಧೀಶರೂ ಒಂದಾಗಬೇಕು ಎಂದು ಹೇಳಿದರು.

ವೇದಿಕೆಯ ಮೇಲೆ ಶಾಸಕರಾದ ಡಿ.ಜಿ. ಶಾಂತನ ಗೌಡ, ಬಿ.ಪಿ. ಹರೀಶ್, ಶಿವಗಂಗಾ ಬಸವರಾಜ, ಮಾಜಿ ಶಾಸಕ ಎಸ್.ಎ. ರವೀಂದ್ರನಾಥ್, ಮಹಾಸಭಾ ಹಿರಿಯ ಉಪಾಧ್ಯಕ್ಷ ಎನ್. ತಿಪ್ಪಣ್ಣ ಮತ್ತಿತರರು ಉಪಸ್ಥಿತರಿದ್ದರು. ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ದೇವರಮನಿ ಶಿವಕುಮಾರ್ ಸ್ವಾಗತಿಸಿದರು. ಚನ್ನಬಸಪ್ಪ ನ್ಯಾಮತಿ ಹಾಗೂ ಸುಮತಿ ಜಯ್ಯಪ್ಪ ನಿರೂಪಿಸಿದರು. ಜಿಲ್ಲಾ ಘಟಕದ ಖಜಾಂಚಿ ಮುಂಡಾಸ್ ವೀರೇಂದ್ರ ವಂದಿಸಿದರು.



ಬಾಪೂಜಿ ಎಂ.ಬಿ.ಎ. ಕಾಲೇಜು ಮೈದಾನದಲ್ಲಿ ಶನಿವಾರ ನಡೆದ ಅಖಿಲ ಭಾರತ ವೀರಶೈವ ಮಹಾಸಭಾದ 24ನೇ ಮಹಾ ಅಧಿವೇಶನದ ಸ್ಮರಣ ಸಂಚಿಕೆಯನ್ನು ಸಂಸದ ಜಿ.ಎಂ. ಸಿದ್ದೇಶ್ವರ ಬಿಡುಗಡೆ ಮಾಡಿದರು.



ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧಿವೇಶನವನ್ನು ವೀಕ್ಷಿಸಲು ಬಂದಂತಹ ಜನಸಾಗರ.

## ವ್ಯಕ್ತಿನಿಂದನೆ ವಿರುದ್ಧವೂ ಕ್ರಮವಾಗಬೇಕು

(3ನೇ ಪುಟದಿಂದ) ಮೈದಾನದಲ್ಲಿ ಏರ್ಪಡಿಸಿದ್ದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮಹಾ ಅಧಿವೇಶನದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ರಾಜಕಾರಣಿಗಳು, ಜನಪ್ರತಿನಿಧಿಗಳು ಹಾಗೂ ಸ್ವಾಮೀಜಿ ಗಳ ವಿರುದ್ಧ ಅನುಚಿತ ಭಾಷಣೆ ಬಳಸಲಾಗುತ್ತಿದೆ ಎಂದರು.

ಈ ಕಾರಣಕ್ಕಾಗಿ ವ್ಯಕ್ತಿನಿಂದನೆ ತಡೆಗಾಗಿ ಕಾನೂನು ಜಾರಿಗೆ ತುರ್ತಾಗಿ ಬರಬೇಕಾದ ಅಗತ್ಯತೆ ತುರ್ತು ಇದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾನೂನು ಜಾರಿಗೊಳಿಸುವ ಸಂಬಂಧ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದರು. ಜಾತಿ ನಿಂದನೆ ಮಾಡಿದಾಗ ಅಟ್ರಾಸಿಟಿ ಪ್ರಕರಣ ದಾಖಲಿಸಲಾಗುತ್ತದೆ. ಆದರೆ, ಈ ಕಾಯ್ದೆಯನ್ನು ಮುಂದುವರಿದ ಜನಾಂಗದವರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಶ್ರೀಗಳು ವಿಷಾದಿಸಿದರು. ಹಿಂದುಳಿದ ಜನಾಂಗದವರನ್ನು ಮುಂದಿಟ್ಟುಕೊಂಡು, ಮುಂದುವರಿದ ಜನಾಂಗದವರು ಬೇರೆಯವರ ಮೇಲೆ ಪ್ರಕರಣ ದಾಖಲಿಸುತ್ತಿದ್ದಾರೆ. ಇದು ಹೋಗಬೇಕು ಎಂದರು.

## ಹುನ್ನಾರ ನಡೆದಿತ್ತು

(3ನೇ ಪುಟದಿಂದ) ಅಲ್ಲದೇ, ನಂತರ ಮೈಸೂರು ಮಹಾರಾಜಾರ ಜೊತೆ ಚರ್ಚಿಸಿ, ಮೀಸಲಾತಿಗೂ ಬುನಾದಿ ಹಾಕಿದರು. ನಂತರ 1918ರಲ್ಲಿ ಹರಿಹರದಲ್ಲಿ ನಡೆದ ವೀರಶೈವ ಲಿಂಗಾಯತ ಮಹಾಸಭಾ ಅಧಿವೇಶನದಲ್ಲಿ ಅವರು ಅಧ್ಯಕ್ಷರಾಗಿದ್ದರು. ಆದರೆ, ಮಹಾಸಭಾದ ಇತಿಹಾಸದಲ್ಲಿ ಈ ವಿವರಗಳು ಬಿಟ್ಟು ಹೋಗಿವೆ. ಈ ಬಗ್ಗೆ ಪರಿಶೀಲಿಸಿ ದಾಖಲಿಸಬೇಕು ಎಂದು ಶ್ರೀಗಳು ಸಲಹೆ ನೀಡಿದರು.

## ಸಮಾಜಕ್ಕೆ '856' ಸಂಖ್ಯಾ ಲಾಂಛನ

(3ನೇ ಪುಟದಿಂದ) ಈ ಸಂಖ್ಯೆಯನ್ನು ತನ್ನ ಚಿಹ್ನೆಯಲ್ಲಿ ಬಳಸಿಕೊಳ್ಳಲು ಯೋಚಿಸಬೇಕು. ಸಮುದಾಯದವರು ತಮ್ಮ ಮನೆಗಳ ಎದುರು ಈ ಸಂಖ್ಯೆ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ವೀರಶೈವ ಎಂದರೆ ವಿರೋಧ ರಹಿತ ಶೈವ ಎಂಬ ಅರ್ಥ ಬರುತ್ತದೆ. ವೀರಶೈವರು ಯಾರನ್ನೂ ವಿರೋಧಿಸುವವರಲ್ಲ. ವಿಶ್ವವೇ ನಮ್ಮ ಬಂಧು ಎಂದು ಭಾವಿಸುವವರು ಎಂದೂ ಶ್ರೀಗಳು ಹೇಳಿದರು. ವೀರಶೈವರು ತಮ್ಮ ಎದೆ ಮೇಲೆ ಲಿಂಗ ಕಟ್ಟಿಕೊಳ್ಳಬೇಕು. ಲಿಂಗಧಾರಣೆ ಹಾಗೂ ಲಿಂಗಾರ್ಚನೆ ಮಾಡಬೇಕು. ದುರ್ಗುಣ ಹಾಗೂ ದುರಾಚಾರಗಳಿಂದ ದೂರವಿರಬೇಕು ಎಂದು ಶ್ರೀಗಳು ಕಿವಿಮಾತು ಹೇಳಿದರು.

## ಸಮುದಾಯಕ್ಕೆ ಮೀಸಲಾತಿ

(3ನೇ ಪುಟದಿಂದ) ಅಖಿಲ ಭಾರತ ವೀರಶೈವ ಮಹಾಸಭಾ ಮಹಾ ಪ್ರಧಾನ ಕಾರ್ಯದರ್ಶಿ ಹಾಗೂ ಸಚಿವ ಈಶ್ವರ ಖಂಡ್ರೆ ವಿಷಾದಿಸಿದರು. ರಾಜ್ಯ ಸರ್ಕಾರದಲ್ಲಿ ವೀರಶೈವ ಲಿಂಗಾಯತ ಸಮುದಾಯ 3ಬಿ ಪಟ್ಟಿಯಲ್ಲಿದೆ. ಆದರೆ, ಕೇಂದ್ರದಲ್ಲಿ ಒ.ಬಿ.ಸಿ. ಮೀಸಲಾತಿಯಿಂದ ಹೊರಗಿದೆ. ಇದರಿಂದಾಗಿ ನಮ್ಮ ಸಮುದಾಯದ ಬಡ ವಿದ್ಯಾರ್ಥಿಗಳು ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂದರು. ವೀರಶೈವ ಲಿಂಗಾಯತರನ್ನು ಒ.ಬಿ.ಸಿ. ಪಟ್ಟಿಯಲ್ಲಿ ಸೇರಿಸಲು ರಾಜ್ಯ ಸರ್ಕಾರ ಶಿಫಾರಸ್ಸು ಮಾಡಬೇಕು. ಕೇಂದ್ರ ಸರ್ಕಾರ ಈ ಶಿಫಾರಸ್ಸಿಗೆ ಒಪ್ಪಿಗೆ ನೀಡಬೇಕು ಎಂದವರು ಆಗ್ರಹಿಸಿದರು.

## ಒಳಪಂಗಡ ಬಳಕೆ ಕಾರಣ

(3ನೇ ಪುಟದಿಂದ) ಒಂದೇ ರೀತಿಯ ಮೀಸಲಾತಿ ಕಲ್ಪಿಸಬೇಕು. ಕೇಂದ್ರದಲ್ಲಿ ಒ.ಬಿ.ಸಿ. ಮೀಸಲಾತಿ ಕಲ್ಪಿಸಬೇಕು. ಸಮಾಜದ ಜನರು ವೀರಶೈವ - ಲಿಂಗಾಯತ ಎಂದೇ ದಾಖಲೆಗಳಲ್ಲಿ ನಮೂದಿ ಸುವಂತಾಗಬೇಕು ಎಂಬ ಸಲಹೆಗಳು ಸಮಾವೇಶದಲ್ಲಿ ಕೇಳಿ ಬಂದವು.

## ನಮ್ಮ ಸೌಭಾಗ್ಯ

106 ವರ್ಷಗಳ ನಂತರ ದಾವಣಗೆರೆಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮಹಾ ಅಧಿವೇಶನವು ನಡೆಯುತ್ತಿರುವುದು ನಮ್ಮೆಲ್ಲರ ಸೌಭಾಗ್ಯ.

**- ದೇವರಮನೆ ಶಿವಕುಮಾರ್,**
ಜಿಲ್ಲಾಧ್ಯಕ್ಷರು, ಅಖಿಲ ಭಾರತ ವೀರಶೈವ ಮಹಾಸಭಾ

# 'ಬೆಣ್ಣೆದೋಸೆ'ಗೆ ಬ್ರಾಂಡಿಂಗ್




### ಪಾಸ್ ಇಲ್ಲದೆ ಪರದಾಡಿದ ಹೋಟೆಲ್ ಮಾಲೀಕರು

**ದೋಸೋತ್ಸವದಲ್ಲಿ ದೋಸೆ ಮಳಿಗೆ ಇಟ್ಟುಕೊಂಡಿದ್ದ ಮಾಲೀಕರು ಅಗತ್ಯ ವಸ್ತುಗಳನ್ನು ತರಲು ಪರದಾಡುವಂತಾಗಿತ್ತು.**

**ಎಂ.ಬಿ.ಎ. ಕಾಲೇಜು ಮೈದಾನದಲ್ಲಿ ವೀರಶೈವ ಲಿಂಗಾಯಾತ ಮಹಾಸಭಾ ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಕಾಲೇಜು ಆವರದೊಳಗೆ ವಾಹನಗಳನ್ನು ನಿಷೇಧಿಸಲಾಗಿತ್ತು. ಆದರೆ ಆವರಣದಲ್ಲಿಯೇ ಬೆಣ್ಣೆ ದೋಸೆ ಮಳಿಗೆಗಳೂ ಇದ್ದುದರಿಂದ ಆ ಸ್ಥಳಕ್ಕೆ ನೀರು ಹಾಗೂ ಅಗತ್ಯ ವಸ್ತುಗಳನ್ನು ತರುವ ವಾಹನ ಗಳನ್ನು ಪೊಲೀಸರು ಬಿಡಲಿಲ್ಲ. ಈ ಹಿನ್ನೆಲೆಯಲ್ಲಿ ಕೆಲ ಮಳಿಗೆಗಳಲ್ಲಿ ವ್ಯಾಪಾರ ಆರಂಭ ತಡವಾಯಿತು. ಮಳಿಗೆಹೊಂದುವ ವರಿಗೆ ಪಾಸ್ ಕೊಡುವುದಾಗಿ ಹೇಳಿದ್ದ ಜಿಲ್ಲಾಡಳಿತ ಪಾಸ್ ಕೊಡದಿರುವುದು ಈ ಅವಾಂತರಕ್ಕೆ ಕಾರಣವಾಗಿತ್ತು.**

(3ನೇ ಪುಟದಿಂದ) ದೋಸೆಯನ್ನು ತಲುಪಿಸುವಲ್ಲಿ ಜಿಲ್ಲಾಡಳಿತ ಸಫಲವಾಗಿದೆ ಎಂದು ಹೇಳಿದರು.

ನಗರದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಕಾರ್ಯಕ್ರಮ ನಡೆಯುತ್ತಿದ್ದು ಬಂದಂತಹ ಜನರಿಗೆ ಬೆಣ್ಣೆ ದೋಸೆಯನ್ನು ಪರಿಚಯಿಸುವ ನಿಟ್ಟಿನಲ್ಲಿ ಈ ಸಂಧರ್ಭದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ದಾವಣಗೆರೆಯ ಗರಿಗರಿ ಬೆಣ್ಣೆ ದೋಸೆಯನ್ನು ಸವಿದು ಆನಂದಿಸಬಹುದಾಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಜಯ್ ಕುಮಾರ್ ಎಂ. ಸಂತೋಷ್, ದಾವಣಗೆರೆ ತಾಲ್ಲೂಕು ತಹಶೀಲ್ದಾರ್ ಡಾ. ಅಶ್ವತ್ ಎಂ.ಬಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಷಣ್ಮುಖಪ್ಪ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕ ಶಿದ್ರಾಮ್ ಮಾರಿಹಾಳ್, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ರಾಘವೇಂದ್ರ ಪ್ರಸಾದ್ ಉಪಸ್ಥಿತರಿದ್ದರು.

## ಹಿಜಾಬ್ ನಿಷೇಧ ವಾಪಸ್

(3ನೇ ಪುಟದಿಂದ) ನಿಷೇಧವನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸರ್ಕಾರ ಪರಿಗಣಿಸುತ್ತಿದೆ ಎಂದು ನಾನು ಉತ್ತರಿಸಿದೆ. ಈ ಶೈಕ್ಷಣಿಕ ವರ್ಷದಲ್ಲಿ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಉಡುಪು ಪ್ರತಿಯೊಬ್ಬರ ವೈಯಕ್ತಿಕ ಆಯ್ಕೆಯ ವಿಷಯವಾಗಿದ್ದು, ರಾಜ್ಯದಲ್ಲಿ ಹಿಜಾಬ್ ಮೇಲೆ ವಿಧಿಸಲಾಗಿರುವ ನಿರ್ಬಂಧವನ್ನು ಹಿಂಪಡೆಯುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಹೇಳಿದ್ದರು.

## ನಗರದಲ್ಲಿಂದು ಆದಿ ಜಾಂಬವ ಜಯಂತ್ಯುತ್ಸವ

ಕರ್ನಾಟಕ ಮಾದಿಗ ದಂಡೋರ ಜಿಲ್ಲಾ ಸಮಿತಿ ವತಿಯಿಂದ ಇಂದು ಮಧ್ಯಾಹ್ನ 12ಕ್ಕೆ ರೋಟರಿ ಬಾಲಭವನದಲ್ಲಿ ಶ್ರೀ ಆದಿ ಜಾಂಬವ ಹಾಗೂ ಶ್ರೀ ಶಿವಶರಣ ಮಾದಾರ ಚನ್ನಯ್ಯ ಜಯಂತಿ ಮತ್ತು ಶ್ರೀಮಾತೆ ಅರುಂಧತಿ ಜಯಂತ್ಯುತ್ಸವ ನಡೆಯಲಿದೆ.


KJS **ಸುವರ್ಣಾವಕಾಶ**

ನಗರ/ಗ್ರಾಮೀಣ ಪ್ರದೇಶದ ಪದವೀಧರ ಯುವಕ-ಯುವತಿಯರಿಗೆ ಕುಮಾರ ಜ್ಯೂಯಲರ್ಸ್‌ನಲ್ಲಿ ಕೆಲಸ ಮಾಡಲು ಸುವರ್ಣಾವಕಾಶ. ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಆಸಕ್ತರು ಸೂಕ್ತ ಪರಿಚಯಸ್ಥರೊಂದಿಗೆ ಸಂಪರ್ಕಿಸಿ.

**ಕುಮಾರ ಜ್ಯೂಯಲರ್ಸ್**
ಮಂಡಿಪೇಟೆ, ದಾವಣಗೆರೆ.
7536 916 916, 99640 88991

**ಫಾರಂ ಗುತ್ತಿಗೆಗೆ ಅಥವಾ ಬಾಡಿಗೆಗಿದೆ**

ಲಿಂಗಾಪುರ-ಆಲೂರಹಟ್ಟಿ ರಸ್ತೆಗೆ ಹೊಂದಿಕೊಂಡಿರುವ 1.5 ಎಕರೆ ಜಮೀನು ಹಾಗೂ ಅಲ್ಲಿರುವ ಸೌಲಭ್ಯಗಳು. ಸುಸಜ್ಜಿತವಾದ 60-70 ಕುರಿಗಳನ್ನು ಸಾಕಲು ಯೋಗ್ಯವಾದ ಎತ್ತರದ ಫಾರಂ. 300 ಫಲ ಕೊಡುವ ಪೇರಲ ಗಿಡಗಳು. 6 ಅಲಂಕಾರಿಕ ಮೀನು ಮರಿಗಳನ್ನು ಬೆಳೆಸಲು ಯೋಗ್ಯವಾದ ಸಿಮೆಂಟ್ ತೊಟ್ಟಿಗಳು. 2 ಸಣ್ಣ ಮನೆಗಳು, 2 ಬೋರ್‌ವೆಲ್ ಇರುವ ಹಾಗೂ 24 ಗಂಟೆ ಕರೆಂಟ್ ಸೌಲಭ್ಯವಿರುವ ಫಾರಂ ಗುತ್ತಿಗೆಗೆ ಅಥವಾ ಬಾಡಿಗೆಗೆ ಸಿಗುತ್ತದೆ. ಆಸಕ್ತಿಯುಳ್ಳವರು ಸಂಪರ್ಕಿಸಿ :

ಫೋನ್ : 94481 86238

**LADIES PG BUILDING FOR RENT**

ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.

Mobi. : 95351 14063, 96203 71544, 97428 35642

**ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ**
**24ನೇ ಮಹಾ ಅಧಿವೇಶನ**

ದಿನಾಂಕ : 24 ಡಿಸೆಂಬರ್ 2023 | ಸ್ಥಳ : ಬಾಪೂಜಿ ಎಂಬಿಎ ಕಾಲೇಜು ಮೈದಾನ, ದಾವಣಗೆರೆ.



**ಶ್ರೀ ಬಾದಾಮಿ ಜಯಣ್ಣ**
ಕಾರ್ಯಾಧ್ಯಕ್ಷರು, ವೀರಶೈವ ಪಂಚಮಸಾಲಿ ಸಮಾಜ ಯುವ ಘಟಕ, ದಾವಣಗೆರೆ.

ಶುಭ ಕೋರುವವರು :
ಬಾದಾಮಿ ಬಸವರಾಜಪ್ಪ ಮತ್ತು ಮಕ್ಕಳು, ಭಾನುವಳ್ಳಿ, ಹರಿಹರ ತಾಲ್ಲೂಕು.

- ✦ ಶ್ರೀ ಕುರುವತ್ತಿ ಬಸವೇಶ್ವರ ರೆಡಿಮೇಡ್ ಗಾರ್ಮೆಂಟ್ಸ್ ಮತ್ತು ವಾಷಿಂಗ್ ಯುನಿಟ್, ಪ್ಲಾಟ್ ನಂ 19, ಕರೂರ್ ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ.
- ✦ ಶ್ರೀ ಸಾಯಿ ಕ್ರಿಯೇಷನ್, ಸಿದ್ಧ ಉಡುಪುಗಳ ತಯಾರಕರು, # 474, ಕೆಂಚಾಂಬ ಕಾಂಪ್ಲೆಕ್ಸ್, ನಿಟುವಳ್ಳಿ, ದಾವಣಗೆರೆ.
- ✦ ಶ್ರೀ ಸಾಯಿ ಗಾರ್ಮೆಂಟ್ಸ್, ಕ್ಲಾತ್ ಮರ್ಚಂಟ್ಸ್, ನಿಟುವಳ್ಳಿ, ದಾವಣಗೆರೆ.
- ✦ ಶ್ರೀ ಸಾಯಿ ಗಾರ್ಮೆಂಟ್ಸ್ ಸಿದ್ಧ ಉಡುಪುಗಳ ತಯಾರಕರು, ಭಾನುವಳ್ಳಿ.
- ✦ ಶ್ರೀ ಸಾಯಿ ಗಾರ್ಮೆಂಟ್ಸ್, ಕ್ಲಾತ್ ಮರ್ಚಂಟ್ಸ್, ಗರಡಿ ಮನೆ ಹತ್ತಿರ, ಭಾನುವಳ್ಳಿ.
- ✦ ಬಸವೇಶ್ವರ ರೆಡಿಮೇಡ್ ಗಾರ್ಮೆಂಟ್ಸ್ ಸಿದ್ಧ ಉಡುಪುಗಳ ತಯಾರಕರು, ಪ್ಲಾಟ್ ನಂ 38, ಡಿ.ಸಿ. ಆಫೀಸ್ ಹತ್ತಿರ, ದಾವಣಗೆರೆ.

**ಶ್ರೀ ಹುಲ್ಲುಮನೆ ಸೌಹಾರ್ದ ಸಹಕಾರ ಲಿ.**
#173/16, ಕಾಲೇಜ್ ರಸ್ತೆ, ನಿಟುವಳ್ಳಿ, ದಾವಣಗೆರೆ-4.
ದೂರವಾಣಿ ಸಂಖ್ಯೆ : 08192 260019

**ಅಧಿಸೂಚನೆ :**
ಈ ಕೆಳಕಂಡ ತಾತ್ಕಾಲಿಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ

| | | | |
|---|---|---|---|
| 01) | ಮುಖ್ಯಕಾರ್ಯನಿರ್ವಾಹಕ ಅಧಿಕಾರಿ (ಬ್ಯಾಂಕಿಂಗ್ & ಆಡಳಿತ ಕ್ಷೇತ್ರದಲ್ಲಿ 5 ವರ್ಷಗಳ ಅನುಭವ) | ಹುದ್ದೆಗಳು - 01 | BE., MBA, M.Com., |
| 02) | ಮ್ಯಾನೇಜರ್ (ನಿವೃತ್ತ ಬ್ಯಾಂಕ್ ಮ್ಯಾನೇಜರ್) | ಹುದ್ದೆಗಳು - 02 | B.com., BBM., MBA., |
| 03) | ಅಭಿವೃದ್ಧಿ ಅಧಿಕಾರಿಗಳು (ಬ್ಯಾಂಕಿಂಗ್) | ಹುದ್ದೆಗಳು - 10 | SSLC, PUC, Degree |
| 04) | ಮಾರ್ಕೆಟಿಂಗ್ ಆಫೀಸರ್ (ಪೈಪ್ ಡಿವಿಜನ್) | ಹುದ್ದೆಗಳು - 05 | Degree |

ಸ್ವಂತ ವಾಹನವುಳ್ಳ ಅಭ್ಯರ್ಥಿಗಳಿಗೆ ಆದ್ಯತೆ. ಅರ್ಜಿ ಸಲ್ಲಿಸುವ ವಿಧಾನ
email ID : hullumanesouhardha@gmail.com
ಆಡಳಿತ ಮಂಡಳಿ



ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ
24ನೇ ಮಹಾ ಅಧಿವೇಶನ
ದಿನಾಂಕ : 23, 24 ಡಿಸೆಂಬರ್ 2023
ಸ್ಥಳ : ಬಾಪೂಜಿ ಎಂಬಿಎ ಕಾಲೇಜು ಮೈದಾನ, ದಾವಣಗೆರೆ.
ಈ ಐತಿಹಾಸಿಕ ಮಹಾಸಭೆಯ ಮಹಾ ಅಧಿವೇಶನಕ್ಕೆ ಆಗಮಿಸುತ್ತಿರುವ ಸಮಾಜ ಬಾಂಧವರಿಗೂ, ಅಭಿಮಾನಿಗಳಿಗೂ, ಸರ್ವರಿಗೂ
ಹೃದಯಪೂರ್ವಕ ಸ್ವಾಗತ... ಸುಸ್ವಾಗತ....
ಕೆ.ಆರ್. ಸಿದ್ದೇಶ್
ಪ್ರಥಮ ದರ್ಜೆ ಗುತ್ತಿಗೆದಾರರು
ಕಕ್ಕರಗೊಳ್ಳ.
ಜಯಂತ್. ಎಸ್.ಪಿ.
ಪ್ರಥಮ ದರ್ಜೆ ಗುತ್ತಿಗೆದಾರರು
ದಾವಣಗೆರೆ.




TITAN WORLD
Now Open at - DAVANAGERE
PB ROAD
ಟೈಟನ್ ವರ್ಲ್ಡ್ TITAN WORLD
D.no.856, new ward no 17,Beside Trends Men, Near Srigandha Lodge,
Old PB road,Davangere - 577001,
PH :9591420888
TITAN
SALE
UP TO
30%
OFF*




24ನೇ ಮಹಾ ಅಧಿವೇಶನ
ಅಖಿಲ ಭಾರತ ವೀರಶೈವ
ಲಿಂಗಾಯತ ಮಹಾಸಭಾ
ದಿನಾಂಕ : 23, 24ನೇ ಡಿಸೆಂಬರ್ 2023
ಸ್ಥಳ : ಬಾಪೂಜಿ ಎಂಬಿಎ ಕಾಲೇಜ್ ಮೈದಾನ, ದಾವಣಗೆರೆ.
ಈ ಐತಿಹಾಸಿಕ ಮಹಾಸಭೆಯ ಮಹಾ ಅಧಿವೇಶನಕ್ಕೆ
ಆಗಮಿಸುತ್ತಿರುವ ಸರ್ವರಿಗೂ ಆದರದ ಸುಸ್ವಾಗತ
ಶುಭಕೋರುವವರು : ಹಾಲೇಶ್ ಗೌಡ ಜಿ.ಬಿ.
ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿಯ ಸಂಯೋಜಕರು, ಹರಿಹರ.